

MAG(2)PRB/CR/165/2022-23 Title code: KARKAN27951

# ಮುಂಜಾನೆ ವಾರ್ತೆ

ಇ–ಪೇಪರ್: www.munjanevarthe.com

MUNJANE VARTHE

EDITOR: H.L.AMARANATH

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ

VOLUME : 2 ISSUE: 119 ಸಂಪುಟ: 02 ಸಂಚಿಕೆ: 119 ಪುಟಗಳು: 04 munjanevarthe 11 TUESDAY JUNE 2024 11 ಮಂಗಳವಾರ ಜೂನ್ 2024 ₹ 2



ಜಾಹೀರಾತಿಗಾಗಿ ಸಂಪರ್ಕಿಸಿ 9663122276 www.munjanevarthe.com


ಗೋವಿಂದ ಕಾರಜೋಳಗೆ ಸಚಿವ ಸ್ಥಾನ ನೀಡಲು ಒತ್ತಾಯ ವಿವರಪುಟ 02

ಮಕ್ಕಳು ದಾರಿ ತಪ್ಪಲು ಪೋಷಕರು ಅವಕಾಶ ನೀಡಬಾರದು ವಿವರಪುಟ 03

ಸಿಮ್ಸ್ ಆಸ್ಪತ್ರೆಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಭೇಟಿ ವಿವರಪುಟ 04

# ಮೋದಿ 3.0 ಕ್ಯಾಬಿನೆಟ್ ಯಾರಿಗೆ ಯಾವ ಖಾತೆ?



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸತತ ಮೂರನೇ ಬಾರಿಗೆ ಕೇಂದ್ರದಲ್ಲಿ ಎನ್?ಡಿಎ ಸರ್ಕಾರ ರಚನೆಯಾಗಿದೆ. ಇಂದು ಪ್ರಧಾನಿ ನೇತೃತ್ವದಲ್ಲಿ ಮೊದಲ ಸಚಿವ ಸಂಪುಟ ಸಭೆ ನಡೆಯಿತು. ಬಳಿಕ ಸಚಿವರಿಗೆ ಖಾತೆ ಹಂಚಲಾಗಿದೆ. ಮೋದಿ ಸೇರಿ 72 ಸಂಪುಟ ಸದಸ್ಯರಲ್ಲಿ 30 ಸಂಪುಟ ದರ್ಜೆ ಸಚಿವರು, ಐವರಿಗೆ ರಾಜ್ಯ ಖಾತೆ (ಸ್ವತಂತ್ರ ನಿರ್ವಹಣೆ) ಮತ್ತು 36 ಸದಸ್ಯರಿಗೆ ರಾಜ್ಯ ಖಾತೆ ನೀಡಲಾಗಿದೆ.

### ಖಾತೆ ಹಂಚಿಕೆ

ನರೇಂದ್ರ ಮೋದಿ – ಪ್ರಧಾನ ಮಂತ್ರಿ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿ, ಪರಮಾಣು ಶಕ್ತಿ, ಬಾಹ್ಯಾಕಾಶ ಇಲಾಖೆ ಮತ್ತು ಹಂಚಿಕೆಯಾಗದ ಇತರೆ ಖಾತೆಗಳು.

### ಸಂಪುಟ ದರ್ಜೆ ಸಚಿವರು:

ರಾಜನಾಥ್ ಸಿಂಗ್ – ರಕ್ಷಣೆ
ಅಮಿತ್ ಶಾ – ಗೃಹ
ನಿತಿನ್ ಜೈರಾಮ್ ಗಡ್ಕರಿ – ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ
ಜಗತ್ ಪ್ರಕಾಶ್ ನಡ್ಡಾ – ಆರೋಗ್ಯ
ಶಿವರಾಜ್ ಸಿಂಗ್ ಚೌಹಾಣ್ – ಕೃಷಿ
ನಿರ್ಮಲಾ ಸೀತಾರಾಮನ್ – ಹಣಕಾಸು
ಸುಬ್ರಹ್ಮಣ್ಯಂ ಜೈಶಂಕರ್ – ವಿದೇಶಾಂಗ
ಮನೋಹರ್ ಲಾಲ್ ಖಟ್ಟರ್ – ಇಂಧನ
ಕಿರೆನ್ ರಿಜಿಜು– ಸಂಸದೀಯ ವ್ಯವಹಾರ
ಹೆಚ್.ಡಿ.ಕುಮಾರಸ್ವಾಮಿ – ಉಕ್ಕು ಮತ್ತು ಬೃಹತ್ ಕೈಗಾರಿಕೆ
ಪಿಯೂಷ್ ಗೋಯಲ್? – ವಾಣಿಜ್ಯ ಇಲಾಖೆ
ಧರ್ಮೇಂದ್ರ ಪ್ರಧಾನ್ – ಶಿಕ್ಷಣ
ಜಿತನ್ ರಾಮ್ ಮಾಂಝಿ – ಸಣ್ಣ ಮತ್ತು ಮಧ್ಯಮ ಕೈಗಾರಿಕೆ
ರಾಜೀವ್ ರಂಜನ್ ಸಿಂಗ್ ಅಲಿಯಾಸ್ ಲಾಲನ್ ಸಿಂಗ್ – ಪಂಚಾಯತ್ ರಾಜ್, ಮೀನುಗಾರಿಕೆ, ಪಶುಸಂಗೋಪನೆ
ಸರ್ಬಾನಂದ ಸೋನೋವಾಲ್ – ಬಂದರು
ಡಾ.ವೀರೇಂದ್ರ ಕುಮಾರ್ – ಸಾಮಾಜಿಕ ನ್ಯಾಯ ಮತ್ತು ಸಮಾಜ ಕಲ್ಯಾಣ
ಕಿಂಜರಾಪುರ ರಾಮಮೋಹನ ನಾಯ್ಡು – ವಿಮಾನಯಾನ
ಪ್ರಲ್ಹಾದ್ ಜೋಶಿ – ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ವಿತರಣೆ, ನವೀಕರಿಸಬಹುದಾದ ಇಂಧನ
ಜುಯಲ್ ಓರಂ – ಆದಿವಾಸಿ ಇಲಾಖೆ
ಗಿರಿರಾಜ್ ಸಿಂಗ್ – ಜವಳಿ ಖಾತೆ
ಅಶ್ವಿನಿ ವೈಷ್ಣವ್ – ರೈಲ್ವೆ, ಮಾಹಿತಿ ತಂತ್ರಜ್ಞಾನ
ಜ್ಯೋತಿರಾದಿತ್ಯ ಎಂ.ಸಿಂಧಿಯಾ – ಕಮ್ಯುನಿಕೇಷನ್, ಈಶಾನ್ಯ ರಾಜ್ಯಗಳ ಅಭಿವೃದ್ಧಿ
ಭೂಪೇಂದರ್ ಯಾದವ್ – ಅರಣ್ಯ ಮತ್ತು ಹವಾಮಾನ
ಗಜೇಂದ್ರ ಸಿಂಗ್ ಶೇಖಾವತ್ – ಪ್ರವಾಸೋದ್ಯಮ
ಅನ್ನಪೂರ್ಣ ದೇವಿ – ಮಹಿಳಾ ಮತ್ತು ಮಕ್ಕಳ ಕಲ್ಯಾಣ
ಹರ್ದೀಪ್ ಸಿಂಗ್ ಪುರಿ – ಪೆಟ್ರೋಲಿಯಂ, ನೈಸರ್ಗಿಕ ಅನಿಲ
ಮನ್ಸುಖ್ ಮಾಂಡವಿಯಾ – ಕಾರ್ಮಿಕ, ಕ್ರೀಡಾ ಮತ್ತು ಯುವಜನ ಇಲಾಖೆ
ಜಿ.ಕಿಶನ್ ರೆಡ್ಡಿ – ಕಲ್ಲಿದ್ದಲು, ಗಣಿ

ಪುಟ 2ಕ್ಕೆ

## ನೂತನ ಕೇಂದ್ರ ಸಚಿವ ಎಚ್.ಡಿ.ಕೆಗೆ ಅಭಿನಂದನೆ



ಮದ್ದೂರು: ನೂತನ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಜೆಡಿಎಸ್ ಮತ್ತು ಬಿಜೆಪಿ ನಿಯೋಗ ದೆಹಲಿಯಲ್ಲಿ ಭೇಟಿ ಮಾಡಿ ಅಭಿನಂದಿಸಿದೆ. ಮಾಜಿ ಶಾಸಕ ಸುರೇಶ್ ಗೌಡ, ಬಿಜೆಪಿ ಮುಖಂಡ ಫೈಟರ್ ರವಿ, ಜೆಡಿಎಸ್ ಯುವ ನಾಯಕ ಕೋಣಸಾಲೆ ಕೆ.ಜಿ. ಮಧುಸೂದನ್ ಅವರು ದೆಹಲಿಯಲ್ಲಿ ನೂತನ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಅಭಿನಂದಿಸಿದ್ದಾರೆ.

## ಗ್ರಾಮಗಳ ಮೂಲ ಸೌಲಭ್ಯಕ್ಕೆ ಕ್ರಮ: ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್



ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಕಾಡಂಚಿನ ತಪ್ಪಲು ಗ್ರಾಮಗಳಿಗೆ ಅಗತ್ಯ ಮೂಲ ಸೌಕರ್ಯ ಒದಗಿಸಲು ಈಗಾಗಲೇ ಪ್ರಸ್ತಾವನೆ ಸಿದ್ದಪಡಿಸಲಾಗಿದ್ದು, ಸೌಲಭ್ಯಗಳಿಗೆ ಎಲ್ಲ ಅಗತ್ಯ ಕ್ರಮ ವಹಿಸಲಾಗುವುದು ಎಂದು ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ತಿಳಿಸಿದರು. ಮಲೆ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಕಾಡಂಚಿನ ಇಂಡಿಗನತ್ತ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ಸ್ಥಳೀಯ ಜನರ ಕುಂದು ಕೊರತೆ ಆಲಿಸಿ ಅವರು ಮಾತನಾಡಿದರು.

ಮಲೆ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಿಗೆ ರಸ್ತೆ, ವಿದ್ಯುತ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲು ಪ್ರಸ್ತಾವನೆ ಸಿದ್ದವಾಗಿದೆ. ಡಾಂಬರು ರಸ್ತೆ ಹಾಗೂ ಸಿಸಿ ರಸ್ತೆಗೆ ಪ್ರತ್ಯೇಕವಾಗಿ ಅಂದಾಜು ಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಅರಣ್ಯ ಪ್ರದೇಶದಿಂದ ಕೇಬಲ್ ಮೂಲಕ ವಿದ್ಯುತ್ ಸೌಲಭ್ಯ ಒದಗಿಸಲು 38 ಕೋಟಿ ರೂ. ವೆಚ್ಚದ ಪ್ರಸ್ತಾವನೆಯನ್ನು ಸಹ ತಯಾರಿಸಲಾಗಿದೆ ಎಂದರು.

ಕಾಡಂಚಿನ ಜನರಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಲು ಬದ್ದವಾಗಿದ್ದೇವೆ. ಇಲ್ಲಿನ ಮಕ್ಕಳ ಶೈಕ್ಷಣಿಕ ಸೌಲಭ್ಯಗಳಿಗೂ

ಪುಟ 2ಕ್ಕೆ

## ಕುಡಿಯುವ ನೀರು ಸಮಸ್ಯೆ ಶೀಘ್ರ ಪರಿಹರಿಸಲು ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಸೂಚನೆ



ಚಾಮರಾಜನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ನಡೆದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರಾದ ವೆಂಕಟೇಶ್

ಜಿಲ್ಲೆಯಲ್ಲಿ ಇತ್ತೀಚೆಗೆ ಸತತವಾಗಿ ಮಳೆಯಾಗುತ್ತಿದ್ದು, ಕುಡಿಯುವ ನೀರಿನ ಪರಿಸ್ಥಿತಿ ಸುಧಾರಿಸಲಿದೆ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದೇ ತಾಂತ್ರಿಕ ಸಮಸ್ಯೆಗಳು ಎದುರಾದರೂ ಅದನ್ನು ಸಮರ್ಪಕವಾಗಿ ನಿಭಾಯಿಸಿ ಕುಡಿಯುವ ನೀರನ್ನು ತ್ವರಿತವಾಗಿ ಪೂರೈಸಲು ಆದ್ಯತೆ ನೀಡಬೇಕು. ಜಿಲ್ಲೆಯ ಯಾವುದೇ ಭಾಗದಲ್ಲಿ ಜನರಿಗೆ ಕುಡಿಯುವ ನೀರು ಪೂರೈಸುವಲ್ಲಿ ನಿರ್ಲಕ್ಷ್ಯ ವಹಿಸಿದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸಚಿವರು ತಾಕೀತು ಮಾಡಿದರು.

ಜನತೆಗೆ ಶುದ್ದ ಕುಡಿಯುವ ನೀರು ಒದಗಿಸುವ ನಿಟ್ಟಿನಲ್ಲಿ ಈಗಾಗಲೇ ಕೊರೆಸಿರುವ ಬೋರ್ವೆಲ್ ಬಳಿ ಸ್ವಚ್ಚತೆ ಕಾಪಾಡಿಕೊಳ್ಳಬೇಕು. ನೀರಿನ ಟ್ಯಾಂಕ್‌ಗಳನ್ನು ಆಗಾಗ್ಗೆ ಸ್ವಚ್ಚಗೊಳಿಸಬೇಕು. ಕುಡಿಯುವ ನೀರಿನ ಪೈಪ್‌ಲೈನ್ ಸೋರಿಕೆಯನ್ನು ಕೂಡಲೇ ಸರಿಪಡಿಸಬೇಕು. ಕುಡಿಯುವ ನೀರಿಗೆ ಇತರೆ ಕಲುಷಿತ ನೀರು ಸೇರದಂತೆ ನಿಗಾ ವಹಿಸಬೇಕು. ಎಲ್ಲಾ ತಾಲೂಕು ಪಂಚಾಯಿತಿ ಕಾರ್ಯನಿವಾಹಕ ಅಧಿಕಾರಿಗಳು ಹಾಗೂ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿ ಅಧಿಕಾರಿಗಳು

ಪುಟ 2ಕ್ಕೆ



ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಗುಂಡಿ ಮುಚ್ಚುವುದು, ಮಳೆಗಾಲ ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಇಂದು ಸಭೆ ನಡೆಸಿ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಯಿತು.

ಈ ವೇಳೆ ವಿಶೇಷ ಆಯುಕ್ತರಾದ ಡಾ. ಕೆ. ಹರೀಶ್ ಕುಮಾರ್, ಸೂರಳ್ಕರ್ ವಿಕಾಸ್ ಕಿಶೋರ್, ಶಿವಾನಂದ ಕಲ್ಕೆರೆ, ವಲಯ ಆಯುಕ್ತರಾದ ಡಾ. ಆರ್.ಎಲ್. ದೀಪಕ್, ಸ್ನೇಹಲ್, ವಿನೋತ್ ಪ್ರಿಯಾ, ರಮೇಶ್, ರಮ್ಯಾ, ಪ್ರೀತಿ ಗೆಹ್ಲೋಟ್, ಕರೀಗೌಡ, ಪ್ರಧಾನ ಅಭಿಯಂತರರು, ವಲಯ ಮುಖ್ಯ ಅಭಿಯಂತರರು ಸೇರಿದಂತೆ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

## ರಾಜ್ಯದಲ್ಲಿ ಇಂದು ಭಾರೀ ಮಳೆ

ಕರಾವಳಿ ಸೇರಿದಂತೆ ರಾಜ್ಯಾದ್ಯಂತ ಮುಂದಿನ 24 ಗಂಟೆ ಭಾರೀ ಮಳೆಯಾಗುವ ಸಾಧ್ಯತೆ ಇದ್ದು, ಒಟ್ಟು 18 ಜಿಲ್ಲೆಗಳಿಗೆ ಯೆಲ್ಲೋ ಮತ್ತು ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳು ಸೇರಿದಂತೆ ಚಿಕ್ಕಮಗಳುರು, ದಾವಣಗೆರೆ, ಕೊಡಗು, ಶಿವಮೊಗ್ಗ, ಬಾಗಲಕೋಟೆ, ಕಲುಬರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ, ಬಳ್ಳಾರಿ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇರುವುದರಿಂದ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಇನ್ನು ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇರುವುದರಿಂದ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಅರಬ್ಬಿ ಸಮುದ್ರದಲ್ಲಿ ಅಲೆ ಅಬ್ಬರ ಹೆಚ್ಚಾಗಿದ್ದು, ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.


ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...
www.munjanevarthe.com
ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುಗುವುದು ಈಗ ಮತ್ತಷ್ಟು ಸುಲಭ

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಮಂಗಳವಾರ 11 ಜೂನ್ 2024
Tuesday 11 June 2024

# ಹ್ಯಾಪಿಯೆಸ್ಟ್ ಹೆಲ್ತ್ ಮೂವ್ ಸಮಾವೇಶದಲ್ಲಿ ಫಿಟ್‌ನೆಸ್ ತಜ್ಞರಿಂದ ಸಂವಾದ ಮತ್ತು ಸ್ಪರ್ಧೆಗಳ ಆಯೋಜನೆ

ಬೆಂಗಳೂರು: ಆರೋಗ್ಯ ಮತ್ತು ಕ್ಷೇಮ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಜ್ಞಾನೋದ್ಯಮವಾದ ಹ್ಯಾಪಿಯೆಸ್ಟ್ ಹೆಲ್ತ್, ವ್ಯಕ್ತಿಗಳು ಫಿಟ್‌ನೆಸ್ ಕುರಿತು ಹೆಚ್ಚಿನ ಗಮನ ಹರಿಸಬೇಕು ಎಂಬ ಉದ್ದೇಶದಿಂದ ಬೆಂಗಳೂರಿನಲ್ಲಿ ಇಂದು ಮೂವ್ ಸಮಾವೇಶವನ್ನು ಆಯೋಜಿಸಿತ್ತು. ದಿನಪೂರ್ತಿ ನಡೆದ ಈ ಸಮಾವೇಶದಲ್ಲಿ ಹಲವಾರು ಸಂವಾದ ಕಾರ್ಯಕ್ರಮಗಳು, ಗೋಷ್ಠಿಗಳು ನಡೆದವು. ಫಿಟ್ ನೆಸ್ ತಂತ್ರಜ್ಞಾನ ಮತ್ತು ಟ್ರೆಂಡ್ ಗಳನ್ನು ಅರಿತುಕೊಳ್ಳುವ ಅವಕಾಶ ಒದಗಿಸಲಾಯಿತು. ಜೊತೆಗೆ ಪರಸ್ಪರ ಸಂಪರ್ಕ ಬೆಳೆಸುವ ಅವಕಾಶವನ್ನೂ ನೀಡಲಾಯಿತು.

ಆರೋಗ್ಯಕರವಾಗಿರುವ ಮತ್ತು ಫಿಟ್ ಆಗಿರುವ ಜೀವನಶೈಲಿ ರೂಢಿಸಿಕೊಳ್ಳಲು ಪರಿಣತರು ಭಾಗವಹಿಸಿದ ಆಸಕ್ತರಿಗೆ ಸಲಹೆಗಳನ್ನು ಮತ್ತು ಪ್ರಾಯೋಗಿಗ ಜ್ಞಾನವನ್ನು ನೀಡಿದರು. ಮೂವ್ (ಎಂಓವಿಇ– ಮೂವ್, ಓನ್, ವೈಟಲೈಸ್ & ಎಂಪವರ್) ತತ್ವವನ್ನು ಆಧರಿಸಿ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯಕರ ಮತ್ತು ಸಂತೋಷಕರ ಬದುಕಿಗಾಗಿ ನಿಯಮಿತವಾಗಿ ಫಿಟ್ ನೆಸ್ ಕಾಯ್ದುಕೊಳ್ಳುವುದು ಅಗತ್ಯ ಎಂಬುದನ್ನು ಸಾರಲಾಯಿತು.

ಸಮಾವೇಶದಲ್ಲಿ ಸ್ಟ್ರೆಂಥ್ ಆಂಡ್ ಕಂಡಿಷನಿಂಗ್ ವಿಭಾಗದಲ್ಲಿ ಸ್ಪರ್ಧೆ ನಡೆಸಲಾಯಿತು. ವಿವಿಧ ವಯಸ್ಸಿನ ಸುಮಾರು 100 ಕ್ಕೂ ಹೆಚ್ಚು ಆಸಕ್ತರು ಈ ಸ್ಪರ್ಧೆಯಲ್ಲಿ ಪಾಲ್ಗೊಂಡರು. ಸರ್ಕ್ಯೂಟ್ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ವಿಜೇತರು ರೂ.50000, ಎರಡನೇ ಬಹುಮಾನ ಪಡೆದರು ರೂ.25000 ಮತ್ತು ಮೂರನೇ ಬಹುಮಾನ ಪಡೆದವರು ರೂ.1000 ನಗದು ಬಹುಮಾನ ಗೆದ್ದುಕೊಂಡರು. ಈ ಒಂದು ದಿನದ ಕಾರ್ಯಕ್ರಮದಲ್ಲಿ ದೈಹಿಕ ಮತ್ತು ಆರೋಗ್ಯಕರ ಜೀವನಶೈಲಿ ನಿರ್ವಹಣೆಯ ಕುರಿತು ಗಮನ ಕೇಂದ್ರೀಕರಿಸಲಾಗಿತ್ತು. ಇವತ್ತಿನ ಬೆಳೆಯುತ್ತಿರುವ ಜಗತ್ತಿನಲ್ಲಿ ವಿವಿಧ ಫಿಟ್‌ನೆಸ್ ಪದ್ಧತಿಗಳ ಮೌಲ್ಯಗಳ ಕುರಿತು ಭಾಗವಹಿಸಿದವರಿಗೆ ಅರಿವು ಮೂಡಿಸಲಾಯಿತು. ಸಮಾವೇಶದಲ್ಲಿ ಭಾಷಣಕಾರರು, ಕ್ರೀಡಾಪಟುಗಳು ಮತ್ತು ಫಿಟ್ ನೆಸ್ ಸೆಲೆಬ್ರಿಟಿಗಳು ಭಾಗವಹಿಸಿದ್ದರು ಮತ್ತು ಜಾಗತಿಕವಾಗಿ ಹೆಸರು ಗಳಿಸಿದ ಫಿಟ್ ನೆಸ್ ಬ್ರಾಂಡ್ ಗಳನ್ನು ಪ್ರದರ್ಶಿಸಲಾಯಿತು. ಸಂವಾದದಲ್ಲಿ ಮೂಳೆ ಮತ್ತು ಸ್ನಾಯುಗಳ ಆರೋಗ್ಯ, ವ್ಯಾಯಾಮ ಮಾಡುವಾಗ ಪಾಲಿಸಬೇಕಾದ ನಿಯಮಗಳು ಮತ್ತು ಆಟದ ಸಂದರ್ಭದಲ್ಲಿನ ಗಾಯ



ತಡೆಗಟ್ಟುವಿಕೆ ಕುರಿತ ಗೋಷ್ಠಿಗಳು ನಡೆದುವು. ನೃತ್ಯ ಕಾರ್ಯಕ್ರಮ ಮತ್ತು ಫಿಟ್ ನೆಸ್ ಕ್ವಿಜ್ ಗಳನ್ನು ಆಯೋಜಿಸಲಾಗಿತ್ತು. ಆಸಕ್ತರು ಮೂವ್ ಸರ್ಕ್ಯೂಟ್‌ನಲ್ಲಿ ಭಾಗವಹಿಸಿದರು. ಜೊತೆಗೆ ಹಲವಾರು ಸುತ್ತಿನ ಫಿಟ್‌ನೆಸ್ ಚಟುವಟಿಕೆಗಳಲ್ಲಿ ಪಾಲ್ಗೊಂಡರು ಮತ್ತು ಶಕ್ತಿ ಮತ್ತು ಸಹಿಷ್ಣುತೆ ವಿಚಾರದ ಸ್ಪರ್ಧೆಯಲ್ಲಿ ಗೆದ್ದವರು ನಗದು ಬಹುಮಾನ ತಮ್ಮದಾಗಿಸಿಕೊಂಡರು.

ಹ್ಯಾಪಿಯೆಸ್ಟ್ ಹೆಲ್ತ್ ನ ನಾಲೆಡ್ಜ್ ಸಿಇಓ ಮತ್ತು ಅಧ್ಯಕ್ಷರಾದ ಶ್ರೀ. ಅನಿಂದ್ಯಾ ಚೌಧರಿ ಅವರು ಸಮಾವೇಶದ ಕುರಿತು ಮಾತನಾಡಿ, "ಮೂವ್ ಫಿಟ್‌ನೆಸ್ ಸಮಾವೇಶವು ಫಿಟ್ ನೆಸ್ ಮತ್ತು ಆರೋಗ್ಯದ ಕುರಿತು ಪ್ರಾಮಾಣಿಕ, ಮುಕ್ತ ಸಂವಾದ ನಡೆಸುವ ಸಲುವಾಗಿ ಆರೋಗ್ಯ ಕುರಿತು ಗಮನ ಹೊಂದಿರುವ ವ್ಯಕ್ತಿಗಳ ಸಮುದಾಯ ಮತ್ತು ಉದ್ಯಮ ನಾಯಕರನ್ನು ಜೊತೆಗೂಡಿಸಿತು. ಹ್ಯಾಪಿಯೆಸ್ಟ್ ಹೆಲ್ತ್ ನಲ್ಲಿ ನಾವು ಹೊಸ ದೃಷ್ಟಿಕೋನಗಳನ್ನು ಅರಿಯುವ

ಆಸಕ್ತಿಯನ್ನು ಹೊಂದಿದ್ದೇವೆ ಮತ್ತು ಆ ಜ್ಞಾನ ಪಡೆಯಲು ಆಸಕ್ತರಿಗೆ ಮುಕ್ತ ಅವಕಾಶವನ್ನೂ ಒದಗಿಸುತ್ತೇವೆ. ಜಾಸ್ತಿ ಆಲೋಚನೆಗಳು, ಐಡಿಯಾಗಳು ಮತ್ತು ಚಟುವಟಿಕೆಗಳನ್ನು ತಿಳಿಸಲು ಹಾಗೂ ಆರೋಗ್ಯ ಮತ್ತು ಕ್ಷೇಮ ವಿಚಾರದಲ್ಲಿ ಜನರಿಗೆ ಸಹಾಯ ಮಾಡಲು ನಾವು ಸದಾ ಮುಂದೆ ಇರುತ್ತೇವೆ" ಎಂದು ಹೇಳಿದರು.

ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ (ಎಎಫ್‌ಐ)ದ ಹಿರಿಯ ಉಪಾಧ್ಯಕ್ಷೆ ಅಂಜು ಬಾಬಿ ಜಾರ್ಜ್ ಮುಖ್ಯ ಭಾಷಣ ಮಾಡುತ್ತಾ, ತಾವು ಕ್ರೀಡಾಪಟುವಾಗಿದ್ದಾಗಿನ ತಮ್ಮ ಪ್ರಯಾಣ ಮತ್ತು ಯಶಸ್ಸಿನ ಕತೆಯನ್ನು ಹಂಚಿಕೊಂಡರು. ಹ್ಯಾಪಿಯೆಸ್ಟ್ ಹೆಲ್ತ್ ನ ಸಿಎಮ್‌ಓ ಆಶಿಶ್ ಪ್ರತಾಪ್ ಸಿಂಗ್ ಜೊತೆಗೆ ನಡೆದ ಸಂವಾದದಲ್ಲಿ ಅಂಜು ಅಂಬಿ ಜಾರ್ಜ್, ಫಿಟ್‌ನೆಸ್ ವಿಷಯದಿಂದ ಹಿಡಿದು ವಿಶ್ರಾಂತಿಯ ಪ್ರಾಮುಖ್ಯತೆ, ಆತ್ಮ ವಿಶ್ವಾಸ ಮತ್ತು ಕ್ರೀಡಾಪಟುವಿನ ತಯಾರಿಯ ಸಂದರ್ಭದ ಪ್ರತಿಯೊಂದು ಹಂತದಲ್ಲೂ ಪೌಷ್ಟಿಕಾಂಶದ ಕುರಿತು ಗಮನ ಹರಿಸಬೇಕಾದ ಅಗತ್ಯ ಇತ್ಯಾದಿ ವಿಷಯಗಳ ಕುರಿತು ಮಾತನಾಡಿದರು. ಇದರ ಜೊತೆಗೆ ಅವರು ಭಾರತೀಯ ಅಥ್ಲೆಟಿಕ್ಸ್ ನ ಭವಿಷ್ಯ ಮತ್ತು ಇಂದಿನ ಕ್ರೀಡಾಪಟುಗಳ ಮೇಲೆ ಇರುವ ಅತಿಯಾದ ನಿರೀಕ್ಷೆಗಳ ಕುರಿತು ಮಾತನಾಡಿದರು. ಮಹತ್ವಾಕಾಂಕ್ಷಿ ಕ್ರೀಡಾಪಟುಗಳನ್ನು ಗುರಿಯಾಗಿಸಿಕೊಂಡು ಮಾತನಾಡಿದ ಅಂಜು ಬಾಬಿ ಜಾರ್ಜ್, "ಮೊದಲನೆಯದಾಗಿ, ನೀವು ಕ್ರೀಡೆಯ ವಿಚಾರದಲ್ಲಿ ಉತ್ತಮ ಶಕ್ತಿಯ ಹೊಂದಿದ್ದೀರಾ ಮತ್ತು ಪ್ರತಿಭೆ ಹೊಂದಿದ್ದೀರಾ ಎಂಬುದನ್ನು ಗುರುತಿಸಿಕೊಳ್ಳಿ. ಒಂದು ವೇಳೆ ಪ್ರತಿಭೆ, ಶಕ್ತಿ ಇಲ್ಲದಿದ್ದರೆ ಸಮಯ ವ್ಯರ್ಥ ಮಾಡಬೇಡಿ. ಒಂದು ವೇಳೆ ನೀವು ಉತ್ತಮ ಸಾಮರ್ಥ್ಯ ಹೊಂದಿದ್ದರೂ ಮುಂದಿನ ದಾರಿ ಸುಲಭವಲ್ಲ. ಮುಂದೆ ಹಲವಾರು ವರ್ಷಗಳು ಕಠಿಣ ಶ್ರಮ ಪಡಬೇಕಾದ ಅವಶ್ಯಕತೆ ಇದೆ. ಸ್ವಲ್ಪ ಉದಾಸೀನ ಮಾಡಿದರೂ ಕಷ್ಟವಾಗುತ್ತದೆ. ನಿಮ್ಮ ಮೇಲೆ ಗಮನ ಕೇಂದ್ರೀಕರಿಸಿ, ಕಷ್ಟ ಪಡಿ ಆಗ ಸಮಯ ನಿಮ್ಮ ಗುರಿ ಸಾಧನೆಗಾಗಿ ನೆರವು ನೀಡುತ್ತದೆ" ಎಂದು ಹೇಳಿದರು.

ಫಿಟ್‌ನೆಸ್ ಗೆ ಸಮಯ ಹೊಂದಿಸುವಿಕೆ ವಿಚಾರ ಕುರಿತು ಮಾತನಾಡಿದ ಡ್ಯಾನ್ಸ್ ಮತ್ತು ಸ್ಟ್ರೆಂತ್ ಫಿಟ್‌ನೆಸ್ ಎಕ್ಸ್ ಪರ್ಟ್ ಹಾಗೂ ಮೈ ಥರ್ಡ್ ಸ್ಪೇಸ್‌ನ ಸಂಸ್ಥಾಪಕಿ ಶ್ವೇತಾಂಬರಿ ಶೆಟ್ಟಿ ಅವರು ಶಕ್ತಿ ಹೊಂದಲು ಮತ್ತು ಚಲನಶೀಲವಾಗಿರಲು ಬೇಕಾದ ವಿವಿಧ ಸರಳ ವ್ಯಾಯಾಮಗಳು ಮತ್ತು ಚಲನಾ ವ್ಯಾಯಾಮಗಳ ಕುರಿತು ತಿಳಿಸಿದರು. ಈ ಪ್ರಾಥಮಿಕ ಚಟುವಟಿಕೆಗಳ ಕುರಿತು ವಿಸ್ತೃತವಾಗಿ ಮಾತನಾಡಿದ ಅವರು, "ನಿಮ್ಮ ಕೀಲುಗಳು, ದೇಹ, ಸ್ನಾಯುಗಳು ಮತ್ತು ಮನಸ್ಸು ಸ್ವಲ್ಪವಾದರೂ ಕ್ರಿಯಾಶೀಲವಾಗಿ ರಬೇಕು. ನಿಮ್ಮ ಮನೆಯಲ್ಲಿ ಅಥವಾ ಕಚೇರಿಯಲ್ಲಿ ಲಿಫ್ಟಿನ ಬದಲಾಗಿ ಮೆಟ್ಟಿಲನ್ನು ಬಳಸಿಕೊಳ್ಳಿ. ಆ ಸಣ್ಣ ವ್ಯಾಯಾಮ ಕೂಡ ನಿಮ್ಮಲ್ಲಿ ಬದಲಾವಣೆ ತರಬಹುದು. ಜೊತೆಗೆ ಈ ಅಭ್ಯಾಸ ನಿಮ್ಮ ದಿನನಿತ್ಯದ ಫಿಟ್ ನೆಸ್ ದಿನಚರಿಯ ಭಾಗವೂ ಆಗಬಹುದು. ಫಿಟ್ ನೆಸ್ ಗಾಗಿ ಸಮಯ ಹೊಂದಿಸುವುದು ಬಹಳ ದೊಡ್ಡ ಕಷ್ಟವೇನಿಲ್ಲ. ನೀವು ಮನೆಯಲ್ಲಿಯೇ ಹಲವಾರು ಕೆಲಸಗಳನ್ನು ಮಾಡಬಹುದು ಮತ್ತು ಆ ಮೂಲಕ ದೃಢವಾಗಿ, ಬಲವಾಗಿ ಇರಬಹುದು. ಈ ಸಲುವಾಗಿ ಸೂಕ್ತವಾಗಿ ಆಹಾರ ಸೇವಿಸುವುದು, ಉತ್ತಮವಾಗಿ ನಿದ್ರೆ ಮಾಡುವುದು ಇತ್ಯಾದಿ ತುಂಬಾ ಮುಖ್ಯ" ಎಂದು ಹೇಳಿದರು.

ದಿ ಔಟ್‌ಫಿಟ್ ಸ್ಪೋರ್ಟ್ಸ್ ಪರ್ಫಾರ್ಮೆನ್ಸ್ ಸಹ–ಸಂಸ್ಥಾಪಕರು ಮತ್ತು ಸ್ಟ್ರೆಂಥ್ ಮತ್ತು ಕಂಡೀಷನಿಂಗ್ ಕೋಚ್ ಹುರ್ಝುಫಾ ಟಿ ಅವರು ಫಿಟ್‌ನೆಸ್ ಮತ್ತು ವೇಟ್ ಮ್ಯಾನೇಜ್‌ಮೆಂಟ್ ಕುರಿತು ಗೋಷ್ಠಿ ನಡೆಸಿಕೊಟ್ಟರು. ಅವರು ಫಿಟ್‌ನೆಸ್ ನ ವಿಕಾಸದ ಕುರಿತು ಮಾತನಾಡಿದರು. ಅವರು ತಮ್ಮ ಸಂವಾದದಲ್ಲಿ ಹಸಿವು, ಡಯಟ್, ವ್ಯಾಯಾಮ, ನಿದ್ದೆಯ ಅಭ್ಯಾಸಗಳು ಮತ್ತು ಇತ್ಯಾದಿಗಳ ಕುರಿತು ಹಲವಾರು ಒಳನೋಟಯುಕ್ತ ವಿಚಾರಗಳನ್ನು ತಿಳಿಸಿದರು. ಮನುಷ್ಯರು ಮತ್ತು ಆಹಾರದ ಮಧ್ಯೆ ಇರುವ ಸಂಬಂಧದ ಕುರಿತು ಮಾತನಾಡಿದ ಹುರ್ಝುಫಾ, "ನಮ್ಮ ದೇಹಕ್ಕೆ ಸೂಕ್ತ ಆಹಾರ ಸಿಗದೇ ಇದ್ದಾಗ ನಮಗೆ ಹಸಿವಿನ ಭಾವನೆ ಉಂಟಾಗುತ್ತದೆ. ಅದೇ ಥರ ನಮ್ಮ ದೇಹಕ್ಕೆ ನಾವು

ಏನೇನು ಮಾಡಬೇಕೋ ಅದನ್ನು ಮಾಡದೇ ಇದ್ದಾಗ ನಮ್ಮ ದೇಹವೂ ವ್ಯತಿರಿಕ್ತವಾಗಿ ವರ್ತಿಸಬಹುದು. ಒಂದು ನಿರ್ದಿಷ್ಟ ಮಾದರಿಯಲ್ಲಿ ವ್ಯಕ್ತಿಗಳು ಹೇಗೆ ಫಿಟ್ ಆಗಿರುತ್ತಾರೆ ಎಂಬುದು ಅರಿಯುವುದು ಮುಖ್ಯ. ನಾವೆಲ್ಲರೂ ಪರಿಸ್ಥಿತಿಗೆ ತಕ್ಕಂತೆ ಫಿಟ್ ನೆಸ್ ವಿಚಾರದಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತೇವೆ. ಆದ್ದರಿಂದ ನೀವು ಎಲ್ಲವನ್ನೂ ತಿನ್ನಿ, ಯಾವಾಗ ಬೇಕಿದ್ದರೂ ತಿನ್ನಿ. ಆದರೆ ಯಾವಾಗ ಹಸಿವಾಗುತ್ತದೋ ಆವಾಗ ಮಾತ್ರ ತಿನ್ನಿ" ಎಂದು ಹೇಳಿದರು.

ಹ್ಯಾಪಿಯೆಸ್ಟ್ ಹೆಲ್ತ್ ಸಂಸ್ಥೆಯು ತಜ್ಞರು, ಉದ್ಯಮದ ನಾಯಕರು ಮತ್ತು ಬದಲಾವಣೆಯ ಹರಿಕಾರರನ್ನು ಜೊತೆಗೂಡಿಸಿ ಕಾರ್ಯಕ್ರಮಗಳ ಮೂಲಕ ಆರೋಗ್ಯ ಮತ್ತು ಕ್ಷೇಮ ವಿಚಾರಗಳ ಕುರಿತು ಸಂವಾದ ನಡೆಸುತ್ತದೆ. ಈ ನಿಟ್ಟಿನಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಮೂವ್ ಸಮಾವೇಶ 2024 ತೀರಾ ಇತ್ತೀಚಿನದು. ಈ ಕಾರ್ಯಕ್ರಮಗಳ ಮೂಲಕ ಆರೋಗ್ಯ ಮತ್ತು ಕ್ಷೇಮ ವಿಚಾರಗಳಲ್ಲಿ ಸಮತೋಲಿತ ಮತ್ತು ಒಳನೋಟಗಳುಳ್ಳ ಚರ್ಚೆ ನಡೆಸಲಾಗುತ್ತದೆ. ಹ್ಯಾಪಿಯೆಸ್ಟ್ ಹೆಲ್ತ್ ಕುರಿತು ಹ್ಯಾಪಿಯೆಸ್ಟ್ ಹೆಲ್ತ್ ಎನ್ನುವುದು ಅಶೋಕ್ ಸೂಟಾ ಅವರು ಸ್ಥಾಪಿಸಿರುವ ಜಾಗತಿಕ ಆರೋಗ್ಯ ಮತ್ತು ಕ್ಷೇಮ ಜ್ಞಾನೋದ್ಯಮವಾಗಿದೆ. ಹ್ಯಾಪಿಯೆಸ್ಟ್ ಹೆಲ್ತ್ ಜಾಗತಿಕವಾಗಿ ಪ್ರಸಿದ್ಧಿ ಹೊಂದಿರುವ ತಜ್ಞರು ಮತ್ತು ವೈದ್ಯರುಗಳ ವಿವರಣೆಗಳ ಜೊತೆಗೆ ಆರೋಗ್ಯ ಮತ್ತು ಕ್ಷೇಮ ವಿಚಾರ ಕುರಿತಾಗಿ ನಂಬಿಕಾರ್ಹ ಮತ್ತು ವಿಶ್ವಾಸಾರ್ಹ ಜ್ಞಾನವನ್ನು ಒದಗಿಸುತ್ತದೆ. ದೈನಂದಿನ ಸುದ್ದಿಪತ್ರ, ನಾಲೆಜ್ ವೆಬ್‌ಸೈಟ್ ಮತ್ತು ಹೊಸದಾಗಿ ಪ್ರಾರಂಭಿಸಲಾದ ಮಾಸಿಕ ಮುದ್ರಣ ಪತ್ರಿಕೆ, ಮತ್ತು ನಾಲೆಜ್ ಆಪ್ ಮತ್ತು ಸಮಾವೇಶಗಳು ಅದರ ಜ್ಞಾನ ಹಂಚುವ ವೇದಿಕೆಗಳಾಗಿವೆ. ಹ್ಯಾಪಿಯೆಸ್ಟ್ ಹೆಲ್ತ್ ನ ಕ್ಷೇಮ ವಿಭಾಗವು ಕಾರ್ಪೋರೇಟ್ ಉದ್ಯೋಗಿಗಳು ಸಂತೋಷಕರ, ಆರೋಗ್ಯಕರ ಮನಸ್ಥಿತಿ ಹೊಂದಲು ಮತ್ತು ಹೆಚ್ಚು ಉತ್ಪಾದಕತೆಯಲ್ಲಿ ತೊಡಗಿಕೊಳ್ಳುವ ವಾತಾವರಣ ಪಡೆಯಲು ಉತ್ತೇಜನ ನೀಡುತ್ತದೆ.

ಹ್ಯಾಪಿಯೆಸ್ಟ್ ಹೆಲ್ತ್ ವೈದ್ಯಕೀಯ ಅಭಿವೃದ್ಧಿಗಳ ಮೇಲೆ ತೀವ್ರ ಗಮನ ಹರಿಸುತ್ತದೆ ಮತ್ತು ವೈಜ್ಞಾನಿಕ ಜ್ಞಾನವನ್ನು ಅಳವಡಿಸಿಕೊಳ್ಳುತ್ತದೆ. ಸೆಲ್– ಆಧರಿತ ಚಿಕಿತ್ಸೆಗಳು ಸೇರಿದಂತೆ ಸೌಮ್ಯ ಚಿಕಿತ್ಸೆಗಳನ್ನು ಒದಗಿಸುತ್ತದೆ. ಆಯುರ್ವೇದ, ಹೋಮಿಯೋಪತಿ ಮತ್ತು ನ್ಯಾಚುರೋಪತಿ ಸೇರಿದಂತೆ ಇಂಟಿಗ್ರೇಟೆಡ್ ಮೆಡಿಸಿನ್ ವಿಭಾಗಳನ್ನೂ ಕವರೇಜ್ ಮಾಡುತ್ತದೆ. ಆರೋಗ್ಯದ ಮೇಲೆ ಇರುವ ಹ್ಯಾಪಿಯೆಸ್ಟ್ ಹೆಲ್ತ್ ನ ಗಮನವು ಸಮಗ್ರವಾಗಿದೆ ಮತ್ತು ಶಕ್ತಿಯುತವಾಗಿದೆ. ಇದರ ಘೋಷವಾಕ್ಯ ಹೀಗಿದೆ: "ಉತ್ತಮ ಜ್ಞಾನ. ಉತ್ತಮ ಆರೋಗ್ಯ" ಮತ್ತು ಅದರ ಪ್ರಯೋಜನಗಳನ್ನು ಎಲ್ಲರಿಗೂ ತಿಳಿಸುತ್ತದೆ.

ಪುಟ 1ರಿಂದ

ಚಿರಾಗ್ ಪಾಸ್ವಾನ್ – ಆಹಾರ ಸಂಸ್ಕರಣೆ
ಸಿ.ಆರ್.ಪಾಟೀಲ್ – ಜಲ ಶಕ್ತಿ ಖಾತೆ

ರಾಜ್ಯ ಖಾತೆ ಸಚಿವರು (ಸ್ವತಂತ್ರ ನಿರ್ವಹಣೆ)

ರಾವ್ ಇಂದರ್‌ಜಿತ್ ಸಿಂಗ್ – ಸಾಂಖ್ಯಿಕ ಮತ್ತು ಯೋಜನಾ ಇಲಾಖೆ, ಸಂಸ್ಕೃತಿ
ಜಿತೇಂದ್ರ ಸಿಂಗ್ – ವಿಜ್ಞಾನ ಮತ್ತು ತಂತ್ರಜ್ಞಾನ, ಭೂವಿಜ್ಞಾನ, ಪ್ರಧಾನಿ ಕಚೇರಿ
ಅರ್ಜುನ್ ರಾಮ್ ಮೇಘವಾಲ್ – ಕಾನೂನು, ಸಂಸದೀಯ ವ್ಯವಹಾರಗಳು
ಜಾಧವ್ ಪ್ರತಾಪ್‌ರಾವ್ ಗಣಪತ್‌ರಾವ್ – ಆಯುಷ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಜಯಂತ್ ಚೌಧರಿ – ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ, ಶಿಕ್ಷಣ

ರಾಜ್ಯ ಖಾತೆ ಸಚಿವರು

ಜಿತಿನ್ ಪ್ರಸಾದ್ – ವಾಣಿಜ್ಯ, ಉದ್ಯಮ ಮತ್ತು ಮಾಹಿತಿ ತಂತ್ರಜ್ಞಾನ
ಶೋಭಾ ಕರಂದ್ಲಾಜೆ – ಅತೀ ಸಣ್ಣ, ಸಣ್ಣ ಕೈಗಾರಿಕೆ ಮತ್ತು ಕಾರ್ಮಿಕ
ವಿ.ಸೋಮಣ್ಣ – ಜಲ ಶಕ್ತಿ ಮತ್ತು ರೈಲ್ವೆ
ಶ್ರೀಪಾದ್ ಯೆಸ್ಸೋ ನಾಯಕ್ – ಇಂಧನ ಮತ್ತು ನವೀಕರಿಸಬಹುದಾದ ಇಂಧನ
ಪಂಕಜ್ ಚೌಧರಿ – ಹಣಕಾಸು
ಕ್ರಿಶನ್ ಪಾಲ್ – ಸಹಕಾರ
ರಾಮದಾಸ್ ಅಠವಳೆ – ಸಾಮಾಜಿಕ ನ್ಯಾಯ ಮತ್ತು ಕಲ್ಯಾಣ
ರಾಮ್ ನಾಥ್ ಠಾಕೂರ್ – ಕೃಷಿ ಮತ್ತು ರೈತ ಕಲ್ಯಾಣ
ನಿತ್ಯಾನಂದ ರೈ – ಗೃಹ ಇಲಾಖೆ
ಅನುಪ್ರಿಯಾ ಪಟೇಲ್ – ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗೊಬ್ಬರ ಮತ್ತು ರಾಸಾಯನಿಕ
ಚಂದ್ರಶೇಖರ್ ಪೆಮ್ಮಸಾನಿ – ಗ್ರಾಮೀಣಾಭಿವೃದ್ಧಿ, ಸಂವಹನ
ಎಸ್.ಪಿ.ಸಿಂಗ್ ಬಘೇಲ್ – ಮೀನುಗಾರಿಕೆ, ಹೈನುಗಾರಿಕೆ
ಕೀರ್ತಿವರ್ಧನ್ ಸಿಂಗ್ – ಪರಿಸರ, ಅರಣ್ಯ ಮತ್ತು ಹವಾಮಾನ, ವಿದೇಶಾಂಗ ಇಲಾಖೆ
ಬಿ.ಎಲ್.ವರ್ಮಾ – ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ವಿತರಣೆ, ಸಾಮಾಜಿಕ ನ್ಯಾಯ ಮತ್ತು ಕಲ್ಯಾಣ
ಶಂತನು ಠಾಕೂರ್ – ಬಂದರು, ಹಡಗು ಮತ್ತು ಜಲಮಾರ್ಗ
ಸುರೇಶ್ ಗೋಪಿ – ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಪ್ರವಾಸೋದ್ಯಮ
ಡಾ.ಎಲ್.ಮುರುಗನ್ – ಮಾಹಿತಿ ಮತ್ತು ಪ್ರಸಾರ, ಸಂಸದೀಯ ವ್ಯವಹಾರ
ಅಜಯ್ ತಮ್ತಾ – ರಸ್ತೆ ಮತ್ತು ಹೆದ್ದಾರಿ
ಬಂಡಿ ಸಂಜಯ್ ಕುಮಾರ್ – ಗೃಹ
ಕಮಲೇಶ್ ಪಾಸ್ವಾನ್ – ಗ್ರಾಮೀಣಾಭಿವೃದ್ಧಿ
ಭಗೀರಥ್ ಚೌಧರಿ – ಕೃಷಿ ಮತ್ತು ರೈತರ ಕಲ್ಯಾಣ
ಸತೀಶ್ ಚಂದ್ರ ದುಬೆ – ಕಲ್ಲಿದ್ದಲು ಮತ್ತು ಗಣಿ
ಸಂಜಯ್ ಸೇಠ್ – ರಕ್ಷಣಾ
ರವನೀತ್ ಸಿಂಗ್ – ಆಹಾರ ಮತ್ತು ಸಂಸ್ಕರಣೆ, ರೈಲ್ವೆ
ದುರ್ಗಾದಾಸ್ ಯುಕೆಯ್ – ಆದಿವಾಸಿ
ರಕ್ಷಾ ನಿಖಿಲ್ ಖಡ್ಸೆ – ಯುವ ಮತ್ತು ಕ್ರೀಡಾ
ಸುಕಾಂತ ಮಜುಂದಾರ್ – ಶಿಕ್ಷಣ, ಈಶಾನ್ಯ ವಲಯದ ಅಭಿವೃದ್ಧಿ
ಸಾವಿತ್ರಿ ಠಾಕೂರ್ – ಮಹಿಳಾ ಮತ್ತು ಮಕ್ಕಳ ಕಲ್ಯಾಣ
ತೋಖಾನ್ ಸಾಹು – ವಸತಿ, ನಗರಾಭಿವೃದ್ಧಿ
ರಾಜ್? ಭೂಷಣ್ ಚೌಧರಿ – ಜಲಶಕ್ತಿ
ಭೂಪತಿ ರಾಜು ಶ್ರೀನಿವಾಸ ವರ್ಮಾ – ಬೃಹತ್ ಕೈಗಾರಿಕೆ ಮತ್ತು ಉಕ್ಕು, ಹರ್ಷ್ ಮಲ್ಹೋತ್ರಾ – ಕಾರ್ಪೋರೇಟ್, ರಸ್ತೆ ಮತ್ತು ಹೆದ್ದಾರಿ, ನಿಮುಬೆನ್ ಜಯಂತಿಭಾಯ್ ಬಂಭಾನಿಯಾ – ಗ್ರಾಹಕ, ಆಹಾರ ಮತ್ತು ವಿತರಣೆ
ಮುರಳೀಧರ್ ಮೊಹೋಲ್ – ಸಹಕಾರ, ವಿಮಾನಯಾನ
ಜಾರ್ಜ್ ಕುರಿಯನ್ – ಅಲ್ಪಸಂಖ್ಯಾತ, ಮೀನುಗಾರಿಕೆ ಮತ್ತು ಪಶುಸಂಗೋಪನೆ ಮತ್ತು ಹೈನುಗಾರಿಕೆ
ಪಬಿತ್ರಾ ಮಾರ್ಗರಿಟಾ – ವಿದೇಶಾಂಗ, ಜವಳಿ ಇಲಾಖೆ

ಪುಟ 1ರಿಂದ

ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸ್ಥಳೀಯ ಗ್ರಾಮಗಳಿಗೆ ಮತ್ತು ಶಾಲಾ ಮಕ್ಕಳಿಗೆ ಅನುಕೂಲವಾಗಲು ಇನ್ನೂ 4 ವಾಹನಗಳನ್ನು ಮಲೆ ಮಹದೇಶ್ವರ ಪ್ರಾಧಿಕಾರದ ವತಿಯಿಂದ ಒದಗಿಸಲು ಸೂಚಿಸಲಾಗಿದೆ ಎಂದರು.

ಸಮಾಜ ಕಲ್ಯಾಣ ಸಚಿವರಾದ ಎಚ್.ಸಿ. ಮಹದೇವಪ್ಪ ಅವರು ಮಾತನಾಡಿ ಸ್ಥಳೀಯ ಜನರಿಗೆ ರಸ್ತೆ, ವಿದ್ಯುತ್ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸಿಕೊಡಲು ನಿಯಮ ಬದ್ಧವಾಗಿ ಕಾನೂನು ಚೌಕಟ್ಟಿನೊಳಗೆ ಕ್ರಮಕ್ಕೆ ಮುಂದಾಗಲಿದ್ದೇವೆ. ಉತ್ತಮ ರಸ್ತೆ, ವಾಹನಗಳ ಸಂಚಾರಕ್ಕೂ ಅನುಕೂಲವಾಗಲಿದೆ. ಸ್ಥಳೀಯವಾಗಿ ಆರೋಗ್ಯ ಉಪಕೇಂದ್ರ ಜನರ ಆರೋಗ್ಯ ಸೌಲಭ್ಯಕ್ಕಾಗಿ ಸಂಚಾರಿ ಆರೋಗ್ಯ ಘಟಕ ಸ್ಥಾಪನೆ ಮಾಡಬಹುದಾಗಿದೆ. ಜನರ ಆರೋಗ್ಯ ಮತ್ತು ರಕ್ಷಣೆ ಮುಖ್ಯವಾಗಿದೆ ಎಂದರು.

ಜಿಲ್ಲಾಡಳಿತ, ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ, ಅರಣ್ಯ ಇಲಾಖೆ ಸೇರಿದಂತೆ ಎಲ್ಲರೊಂದಿಗೆ ಚರ್ಚಿಸಿ ನಾಗರಿಕ ಮೂಲ ಸೌಲಭ್ಯ ಒದಗಿಸುವ ಕೆಲಸವನ್ನು ಹಂತ ಹಂತವಾಗಿ ಮಾಡಲಾಗುವುದು. ಜನರ ಸಮಸ್ಯೆಗಳಿಗೆ ಸ್ಪಂದಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವರಾದ ಎಚ್.ಸಿ. ಮಹದೇವಪ್ಪ ಅವರು ತಿಳಿಸಿದರು.

ಸಭೆ ಆರಂಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಮಾತನಾಡಿ ಸ್ಥಳೀಯರ ಸಮಸ್ಯೆಗಳನ್ನು ಆಲಿಸಲಾಗಿದೆ. ಜನರ ಕುಂದು ಕೊರತೆಗಳ ಪರಿಹಾರಕ್ಕೆ ಅಧಿಕಾರಿಗಳೊಂದಿಗೆ ಚರ್ಚಿಸಿ ಪ್ರಸ್ತಾವನೆ ಸಿದ್ದಪಡಿಸಲಾಗಿದೆ. ಶಾಲಾ ವಿದ್ಯಾರ್ಥಿಗಳ ಮುಂದಿನ ಹಂತದ ವಿದ್ಯಾಭ್ಯಾಸ ಹಾಗೂ ಹಾಸ್ಟೆಲ್ ಇನ್ನಿತರ ಸೌಲಭ್ಯಗಳಿಗೆ ಕ್ರಮ ವಹಿಸಲಾಗುತ್ತಿದೆ ಎಂದರು ಇದೇ ವೇಳೆ ಸ್ಥಳೀಯರು ಮಾತನಾಡಿ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು. ಮಾಜಿ ಶಾಸಕರಾದ ಆರ್. ನರೇಂದ್ರ ಅವರು ಸ್ಥಳೀಯ ಜನರ ಸಮಸ್ಯೆಗಳ ಬಗ್ಗೆ ಗಮನಸೆಳೆದರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಕಾಡಾ ಅಧ್ಯಕ್ಷರಾದ ಮರಿಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ವೃತ್ತ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಿರಾಲಾಲ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಸಂತೋಷ್ ಕುಮಾರ್, ತಹಶೀಲ್ದಾರ್ ಗುರುಪ್ರಸಾದ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ವರದಿ: ಹಂಗಳ ಮಹದೇವಪ್ರಸಾದ್

## ಗೋವಿಂದ ಕಾರಜೋಳಗೆ ಸಚಿವ ಸ್ಥಾನ ನೀಡಲು ಒತ್ತಾಯ

ಪಾವಗಡ: ದಲಿತ ಸಮುದಾಯದ ಹಿರಿಯ ರಾಜಕಾರಣಿ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸಂಸದ ಗೋವಿಂದ ಎಂ.ಕಾರಜೋಳ ಅವರಿಗೆ ಕೇಂದ್ರ ಸರ್ಕಾರದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಬಿಜೆಪಿ ಮಧುಗಿರಿ ಜಿಲ್ಲಾ ಎಸ್.ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಿ.ಹೊಸಹಳ್ಳಿ ಪ್ರಸಾದ್ ಬಾಬು ಒತ್ತಾಯಿಸಿದ್ದಾರೆ.



ಸೋಮವಾರ ಪಟ್ಟಣದ ನಿರೀಕ್ಷಣಾ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೋವಿಂದ ಕಾರಜೋಳ ಅವರು ಈ ಹಿಂದೆ ರಾಜ್ಯ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ಕ್ಷೇತ್ರದ ಜೊತೆಗೆ ರಾಜ್ಯದ ಸರ್ವಾಂಗೀಣಾ ಅಭಿವೃದ್ಧಿಗೆ ಶ್ರಮಿಸಿರುತ್ತಾರೆ. ಅಲ್ಲದೇ ಇವರು ಮಾಜಿ ಸಂಸದ ಹಾಗೂ ಪ್ರಬಲ ಪ್ರತಿಸ್ಪರ್ಧಿಯಾದ ಬಿ.ಎನ್.ಚಂದ್ರಪ್ಪ ಅವರನ್ನು ಸೋಲಿಸುವ ಮೂಲಕ ಪಕ್ಷದ ವರ್ಚಸ್ಸನ್ನು ಹೆಚ್ಚಿಸಿರುತ್ತಾರೆ. ಹೀಗಾಗಿ ಇವರಿಗೆ ಲೋಕಸಭೆ ಕ್ಯಾಬಿನೆಟ್ ದರ್ಜೆಯಲ್ಲಿ ಸ್ಥಾನ ನೀಡಬೇಕೆಂದು ಬಿಜೆಪಿ ಹೈಕಮಾಂಡ್ ಗೆ ಒತ್ತಾಯಿಸಿದ್ದಾರೆ.

ಕೇಂದ್ರ ಸಚಿವ ಸಂಪುಟದಲ್ಲಿ ಎಡಗೈ ಸಮುದಾಯದ ಗೋವಿಂದ ಕಾರಜೋಳ ಅವರನ್ನು ಕೈ ಬಿಟ್ಟಿರುವುದು ಸರಿಯಾದ ಕ್ರಮವಲ್ಲ. ಕರ್ನಾಟಕ ರಾಜ್ಯದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಮಾದಿಗ ಸಮುದಾಯವಿದ್ದು, ಕೇವಲ ಸಮುದಾಯಕ್ಕೆ ಸೀಮಿತವಾಗದೆ ರಾಜ್ಯದ ಹಿತದೃಷ್ಟಿಯಿಂದ ಅತ್ಯಂತ ಅನುಭವಿಯಾಗಿರುವ ಇವರು ಸಚಿವ ಸ್ಥಾನ ಪಡೆಯಲು ಅರ್ಹರಿದ್ದು ಅವಕಾಶ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ಪುಟ 1ರಿಂದ

ಈ ಬಗ್ಗೆ ತುರ್ತು ಪರಿಹಾರ ಕ್ರಮಗಳನ್ನು ವಹಿಸಬೇಕು. ತಪ್ಪಿದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಉಸ್ತುವಾರಿ ಸಚಿವರು ಸೂಚಿಸಿದರು.

ಕೊಳ್ಳೇಗಾಲ ತಾಲೂಕಿನ ಮಧುವನಹಳ್ಳಿಯಲ್ಲಿ ಕಲುಷಿತ ನೀರು ಸೇವಿಸಿ ಜನರು ಅಸ್ವಸ್ಥಗೊಂಡಿದ್ದರು. ಅಂತಹ ಪ್ರಕರಣ ಜಿಲ್ಲೆಯಲ್ಲಿ ಮತ್ತೆ ಮರುಕಳಿಸದಂತೆ ಅಧಿಕಾರಿಗಳು ಎಚ್ಚರ ವಹಿಸಬೇಕು. ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿರುವ ಶುದ್ಧ ಕುಡಿಯುವ ನೀರಿನ (ಆರ್.ಓ ಪ್ಲಾಂಟ್) ಘಟಕಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟಿದ್ದರೆ ಸಂಬಂಧಪಟ್ಟ ಏಜೆನ್ಸಿಗಳಿಗೆ ಟೈಮ್‌ಲೈನ್ ನಿಗದಿಪಡಿಸಿ ದುರಸ್ಥಿಪಡಿಸಲು ಮುಂದಾಗಬೇಕು ಎಂದು ಸಚಿವರು ತಿಳಿಸಿದರು.

ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುತ್ತಿರುವರಿಂದ ಕೃಷಿ ಚಟುವಟಿಕೆಗಳು ಆರಂಭವಾಗಿವೆ. ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಅಗತ್ಯವಿರುವಷ್ಟು ದಾಸ್ತಾನು ಇಟ್ಟುಕೊಳ್ಳಬೇಕು. ರಸಗೊಬ್ಬರವನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡದಂತೆ ಖಾಸಗಿ ಅಂಗಡಿಗಳಿಗೆ ಸೂಚನೆ ನೀಡಬೇಕು. ಸೊಸೈಟಿ ಮೂಲಕ ರೈತರಿಗೆ ರಸಗೊಬ್ಬರ ಒದಗಿಸಬೇಕು. ಯೂರಿಯಾ ಗೊಬ್ಬರವನ್ನು ಕಡಿಮೆ ಬೆಲೆಗೆ ಖರೀದಿಸಿ ಅಂತರರಾಜ್ಯದಲ್ಲಿ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಈ ಸಂಬಂಧ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ಬಿಗಿಗೊಳಿಸಬೇಕು. ಮಳೆಗಾಳಿಯಿಂದ ಉಂಟಾಗಿರುವ ಬೆಳೆಹಾನಿಗೆ ಕಾಲಮಿತಿಯಲ್ಲಿ ಪರಿಹಾರ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಹೇಳಿದರು.

ಸಮಾಜ ಕಲ್ಯಾಣ ಸಚಿವರಾದ ಎಚ್.ಸಿ. ಮಹದೇವಪ್ಪ ಅವರು ಮಾತನಾಡಿ ಜಿಲ್ಲೆಯಾದ್ಯಂತ ಕುಡಿಯುವ ನೀರು ಸಮಸ್ಯೆ ತಲೆದೋರದಂತೆ ಎಲ್ಲಾ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು. ಸಮಸ್ಯೆ ಎದುರಾಗುವ ಮೊದಲೇ ಅಧಿಕಾರಿಗಳು ಕಾರ್ಯ ಸನ್ನದ್ಧರಾಗಬೇಕು.

ಜಿಲ್ಲೆಯಲ್ಲಿ ಬಡವರು, ಅಸಹಾಯಕರು, ಹಿಂದುಳಿದವರು, ಪರಿಶಿಷ್ಟ ವರ್ಗದವರು ಅಧಿಕ ಸಂಖ್ಯೆಯಲ್ಲಿದ್ದು, ನಿರೀಕ್ಷಿತ ಮಟ್ಟದಲ್ಲಿ ಎಲ್ಲರ ಅಭಿವೃದ್ಧಿಯಾಗಬೇಕು ಎಂದು ತಿಳಿಸಿದರು.

ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಮಾತನಾಡಿ ಚಾಮರಾಜನಗರ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಬೇಕು. ತಾಲೂಕಿನ ವಿವಿಧ ಗ್ರಾಮಗಳಲ್ಲಿ ಮಳೆಗಾಳಿಯಿಂದ ಸಾಕಷ್ಟು ಮನೆಗಳು ಹಾನಿಗೊಳಗಾಗಿವೆ. ಈ ಸಂಬಂಧ ಕಂದಾಯ ಇಲಾಖೆಯ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಮನೆ ಹಾನಿಯಾಗಿರುವ ಬಗ್ಗೆ ವರದಿ ಸಂಗ್ರಹಿಸಬೇಕು. ಹಾನಿಯಾದ ಮನೆಗಳಿಗೆ ಶೀಘ್ರ ಪರಿಹಾರ ನೀಡಿ, ಸೂರು ಕಲ್ಪಿಸುವ ಕೆಲಸವಾಗಬೇಕು ಎಂದರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಮಾತನಾಡಿ ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆ ಹಾಗೂ 24*7 ಕುಡಿಯುವ ನೀರಿನ ಯೋಜನೆಗಳನ್ನು ಅದಷ್ಟು ಬೇಗನೆ ಪೂರ್ಣಗೊಳಿಸಬೇಕು. ಜಿಲ್ಲಾಧಿಕಾರಿಗಳು ಈ ಬಗ್ಗೆ ಖುದ್ದು ಪರಿಶೀಲಿಸಿ ಸಮಸ್ಯೆ ಇತ್ಯರ್ಥಪಡಿಸಬೇಕು. ಬಿ.ಆರ್.ಟಿ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಲ್ಲಿ ಜಲಜೀವನ ಮಿಷನ್ ಯೋಜನೆಯಡಿ ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿಯಲ್ಲಿ ಅರಣ್ಯ ನೀತಿಯಿಂದ ಆಗುತ್ತಿರುವ ತೊಡಕುಗಳನ್ನು ಅಧಿಕಾರಿಗಳು ನಿವಾರಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳಾದ ಶಿಲ್ಪಾ ನಾಗ್ ಅವರು ಕುಡಿಯುವ ನೀರು ಪೂರೈಕೆ ಸಂಬಂಧ ನೀರು ಕಲುಷಿತಗೊಳ್ಳದಂತೆ ಎಚ್ಚರ ವಹಿಸಲು ಎಲ್ಲಾ ಅಧಿಕಾರಿಗಳಿಗೂ ಸೂಚನೆ ನೀಡಲಾಗಿದೆ. ಚಾಮರಾಜನಗರ ಹಾಗೂ ಕೊಳ್ಳೇಗಾಲದಲ್ಲಿ ನೀರು ಶುದ್ಧಿಕರಣ ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರಿನ ಪರೀಕ್ಷೆ ನಡೆಸಲಾಗುತ್ತಿದೆ. ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಸಮರ್ಪಕ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಕಾಡಾ ಅಧ್ಯಕ್ಷರಾದ ಮರಿಸ್ವಾಮಿ, ಮೈಸೂರು ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ, ಚಾಮರಾಜನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಾ ಜೆ. ಕಂಟ್ರಾಕ್ಟರ್, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಮಂಗಳವಾರ 11 ಜೂನ್ 2024
Tuesday 11 June 2024

# ಮಕ್ಕಳು ದಾರಿ ತಪ್ಪಲು ಪೋಷಕರು ಅವಕಾಶ ನೀಡಬಾರದು

ಕೆ.ಆರ್.ಪೇಟೆ: ಮಕ್ಕಳು ದಾರಿ ತಪ್ಪಲು ಪೋಷಕರು ಅವಕಾಶ ನೀಡಬಾರದು ಎಂದು ಹೇಮಗಿರಿ ಬಿಜಿಎಸ್ ಶಾಖಾ ಮಠದ ಪ್ರಧಾನ ಕಾರ್ಯದರ್ಶಿ ಡಾ:ಜೆ.ಎನ್ ರಾಮಕೃಷ್ಣೇಗೌಡ ಅಭಿಪ್ರಾಯಪಟ್ಟರು. ಧಾರವಾಡದ ವಿಕಾಸ ನಗರದಲ್ಲಿರುವ ಬಿಜಿಎಸ್ ಎಜುಕೇಷನ್ ಸೆಂಟರ್ ಆವರಣದಲ್ಲಿ ನೆಡೆದ ಜ್ಞಾನಾಂಕುರ (ಅಕ್ಷರಾಭ್ಯಾಸ) ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು.ಮಕ್ಕಳು ನಮ್ಮ ಬದುಕಿನ ಶಕ್ತಿ. ಅವರನ್ನು ಪಾಲನೆ, ಪೋಷಣೆ ಮಾಡುವುದು ಅತಿಮುಖ್ಯ. ಅಪ್ಪ, ಅಮ್ಮ ತಪ್ಪು ಮಾಡಿದರೆ ಅದು ಮಕ್ಕಳು ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಶಾಲೆಯಲ್ಲಿ ಶಿಕ್ಷಕರು ಉದ್ದಾರ ಮಾಡುತ್ತಾರೆ ಅಂದುಕೊಂಡು ಸುಮ್ಮನೆ ಇರಬಾರದು. ಪ್ರೀತಿಯಿಂದ ವಿದ್ಯೆ ಕಲಿಸಬೇಕು ತಾಯಿ ನಕ್ಕರೆ ಮನೆಯೂ ನಗುತ್ತದೆ. ತಾಯಿ ಅತ್ತರೆ ಇಡೀ ಮನೆಯೇ ಅಳುತ್ತದೆ. ಈ ದೃಷ್ಟಿಯಂದ ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠ ಶಾಲೆ.

ಪ್ರಕೃತಿ ಸಮಾನಳಾದ ತಾಯಿಗೆ ಭಗವಂತನ ಶಕ್ತಿ ಇರಲಿ ಎಂದು ಪ್ರಾರ್ಥಿಸಿದರು ಯಾವುದೇ ಪುಣ್ಯದ ಕೆಲಸ ಮಾಡುವ ಮುನ್ನ ಓಂ ಸ್ತುತಿ ಮಾಡಲಾಗುತ್ತದೆ.ಓಂ ಅನ್ನೋದು ಒಂದು ಧರ್ಮ ಅಥವಾ ಸಂಪ್ರದಾಯಕ್ಕೆ ಸೇರಿದ್ದಲ್ಲ. ಇದಕ್ಕೆ ಚೈತನ್ಯವಾದ, ಅಗೋಚರವಾದ ಶಕ್ತಿ ಇದೆ. ಅದೇ ದೇವರು. ದೇವರನ್ನು ಒಂದೊಂದು ಧರ್ಮವರು ಒಂದೊಂದು ರೀತಿ ಕರೆದುಕೊಂಡರು. ಆದರೆ ಭಾಷೆ ಬದಲಾದರೂ ಭಾವನೆ ಬದಲಾಗುವುದಿಲ್ಲ.ವಿಘ್ನ ನಿವಾರಕ ಗಣಪತಿ ಓಂಕಾರದ ಶಕ್ತಿ ರೂಪ. ಗಣಪತಿಗೆ ಬೇರೆ ಬೇರೆ ಆಕಾರ ಕೊಟ್ಟಿದ್ದರೂ, ಒಂದೊಂದು ಆಕಾರಕ್ಕೂ ಒಂದೊಂದು ಅರ್ಥವಿದೆ. ಹೀಗಾಗಿ ಮಕ್ಕಳಿಗೆ ಓಂಕಾರದ ಮೂಲಕ ಜ್ಞಾನದ ಉಪಾಸನೆ ಅಂಕುರವಾಗುವಂತೆ ಮಾಡುವ ಕಾರ್ಯಕ್ರಮವಿದು ಎಂದರು. ಹೇಮಗಿರಿ ಶಾಖಾ ಮಠದ ಪ್ರಧಾನ ಕಾರ್ಯದರ್ಶಿ ಡಾ. ಜೆ.ಎನ್.ರಾಮ ಕೃಷ್ಣಗೌಡ ನೇತೃತ್ವದಲ್ಲಿ ಮಕ್ಕಳಿಗೆ ಜ್ಞಾನಾಂಕುರ ಅಕ್ಷರಾಭ್ಯಾಸ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಸರಸ್ವತಿ, ಗಣಪತಿಗೆ ಪೂಜೆ ಸಲ್ಲಿಸಿ ಹೋಮ, ಹವನ ಹಾಗೂ ಅಭಿಷೇಕದೊಂದಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಪಾಲಕರು ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಜತೆಗೆ ತಮ್ಮ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿದರು. ಶಾಲೆಯ ನೂರಾರು ಸಂಖ್ಯೆಯ ಪುಟ್ಟ ಮಕ್ಕಳ ಪಾಲಕರು ಭಾಗವಹಿಸಿದ್ದರು.

ಸುದ್ದಿಯೊಂದಿಗೆ ಮನು ಮಾಕವಳ್ಳಿ
ಕೆ ಆರ್ ಪೇಟೆ

# ಕುಮಾರಸ್ವಾಮಿಯವರಿಂದ ಜಿಲ್ಲೆಯ ಸಮಗ್ರ ಅಭಿವೃದ್ಧಿ ನಿಖಿಲ್ ಕುಮಾರಸ್ವಾಮಿ ವಿಶ್ವಾಸ



*ಮದ್ದೂರು ತಾಲೂಕಿನ ಮರಳಿಗ ಗ್ರಾಮಕ್ಕೆ ಆಗಮಿಸಿದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಮಾಜಿ ಶಾಸಕ ಸುರೇಶ್ ಗೌಡ ಅವರನ್ನು ಜಿ.ಪಂ ಮಾಜಿ ಸದಸ್ಯ ಎಂ. ಮರಿಹೆಗಡೆ ಹಾಗೂ ಉದ್ಯಮಿ ಸಮಾಜ ಸೇವಕ ಮರಳಿಗ ಸತೀಶ್ ಅವರು*

ಮದ್ದೂರು: ಮಂಡ್ಯ ಲೋಕಸಭಾ ಕ್ಷೇತ್ರದ ಮತದಾರರು ಎಚ್.ಡಿ. ಕುಮಾರಸ್ವಾಮಿ ಅವರನ್ನು ಅತ್ಯಧಿಕ ಮತಗಳ ಅಂತರದಿಂದ ಸಂಸದರನ್ನಾಗಿ ಆಯ್ಕೆ ಮಾಡಿದ್ದಾರೆ. ಜಿಲ್ಲೆಯನ್ನು ಎಚ್.ಡಿ. ಕುಮಾರಸ್ವಾಮಿ ಅವರು ಸಮಗ್ರವಾಗಿ ಅಭಿವೃದ್ಧಿ ಮಾಡಲಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಮರಳಿಗ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರು ಮತ್ತು ಜಿ.ಪಂ ಮಾಜಿ ಸದಸ್ಯ ಎಂ. ಮರಿಹೆಗಡೆ ಹಾಗೂ ಉದ್ಯಮಿ ಮತ್ತು ಸಮಾಜ ಸೇವಕ ಮರಳಿಗ ಸತೀಶ್ ಅವರಿಂದ ಅಭಿನಂದನೆ ಸ್ವೀಕರಿಸಿ ನಂತರ ಅವರು ಮಾತನಾಡಿದರು. ಮಂಡ್ಯ ಜಿಲ್ಲೆಗೂ, ಎಚ್.ಡಿ. ಕುಮಾರಸ್ವಾಮಿ ಅವರಿಗೂ ಅವಿನಾಭಾವ ಸಂಬಂಧವಿದೆ ಎಂಬುವುದನ್ನು ಜಿಲ್ಲೆಯ ಜನ ಸಾಬೀತು ಮಾಡಿದ್ದಾರೆ. ಜಿಲ್ಲೆಯ ಮತದಾರರು ಎಚ್.ಡಿ. ಕುಮಾರಸ್ವಾಮಿ ಅವರನ್ನು ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ಕುಮಾರಸ್ವಾಮಿಯವರಿಗೆ ಶಕ್ತಿ ತುಂಬಿದ್ದಾರೆ, ಇದು ನ್ಯಾಯ, ನಿಷ್ಠೆ ಮತ್ತು ಸತ್ಯಕ್ಕೆ ಸಿಕ್ಕ ಜಯವಾಗಿದೆ. ಜಿಲ್ಲೆಯಲ್ಲಿ ಹೆಚ್ಚು ಕಾಂಗ್ರೆಸ್ ಶಾಸಕರಿದ್ದರು ಹಾಗೂ ಕಾಂಗ್ರೆಸ್ ನಾಯಕರ ಮಾತಿಗೆ ಮರುಳಾಗದೆ ನಿಜವಾದ ರೈತ ಮತ್ತು ಜನನಾಯಕರಾದ ಎಚ್.ಡಿ. ಕುಮಾರಸ್ವಾಮಿ ಅವರನ್ನು ಗೆಲ್ಲಿಸುವ ಮೂಲಕ ದೇಶದಲ್ಲೇ ಇತಿಹಾಸ ಸೃಷ್ಟಿ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಅತ್ಯುತ್ತಮ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ಜಿಲ್ಲೆಯ ಜನರ ಮನ ಗೆಲ್ಲಲಿದ್ದಾರೆ ಎಂದರು. ಮಾಜಿ ಶಾಸಕ ಸುರೇಶ್ ಗೌಡ ಅವರು ಮಾತನಾಡಿ, ಎಚ್.ಡಿ. ಕುಮಾರಸ್ವಾಮಿ ಅವರ ಗೆಲುವಿನಿಂದ ಜಿಲ್ಲೆಯ ಜೆಡಿಎಸ್ ಮತ್ತು ಬಿಜೆಪಿ ನಾಯಕರಿಗೆ ಹೊಸ ಹುರುಪು ಬಂದಂತಾಗಿದೆ. ಸರ್ವಾಧಿಕಾರಿ ಧೋರಣೆಗೆ ಕೊನೆಗೊಳ್ಳಲಿದ್ದು, ಜನಪರ ಆಡಳಿತ ಮನೆ ಮನೆಗೆ ತಲುಪಲಿದೆ. ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದಲ್ಲಿ ಮಂತ್ರಿ ಆಗಲಿದ್ದು ಮಂಡ್ಯ ಜಿಲ್ಲೆ ಸಮಗ್ರವಾಗಿ ಅಭಿವೃದ್ಧಿಯಾಗಲಿದೆ ಎಂದರು.

ಜಿ.ಪಂ. ಮಾಜಿ ಸದಸ್ಯ ಎಂ. ಮರಿಹೆಗಡೆ, ಉದ್ಯಮಿ, ಸಮಾಜ ಸೇವಕ ಮರಳಿಗ ಸತೀಶ್, ಅಶೋಕ, ಬೆಸಗರಹಳ್ಳಿ ಶಶಿ ಸೇರಿದಂತೆ ಇತರರು ಇದ್ದರು.

# ನರೇಂದ್ರ ಮೋದಿರವರು ಸತತವಾಗಿ ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕಾರ

*ಅಲ್ಲದೆ ರಾಷ್ಟ್ರವನ್ನು ಆರ್ಥಿಕವಾಗಿ ಐದನೇ ಸ್ಥಾನಕ್ಕೆ ಕೊಂಡೊಯ್ಯುವ ಮೂಲಕ ವಿಕಾಸದ ಹಾದಿ ತೋರಿಸಿದ ಮಹಾನ್ ನಾಯಕ ಮೋದಿಜೀ ಆಗಿದ್ದಾರೆ ಅವರ ನಾಯಕತ್ವದಲ್ಲಿ ದೇಶ ಮತ್ತಷ್ಟು ಅಭಿವೃದ್ಧಿ ಕಾಣಲಿದೆ ಎಂದರು.*



ತಿ.ನರಸೀಪುರ. ನರೇಂದ್ರ ಮೋದಿರವರು ಸತತವಾಗಿ ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಪಟ್ಟಣದಲ್ಲಿ ಸಂಭ್ರಮಾಚರಣೆ ಮಾಡಿದರು.

ಪಟ್ಟಣದ ಶಿವನಂದ ಶರ್ಮ ವೃತ್ತದ ಬಳಿ ಡಾ.ರೇವಣ್ಣ ಹಾಗೂ ಮಂಡಲ ಅಧ್ಯಕ್ಷ ಶಿವಕುಮಾರ್ (ಸತ್ಯರಾಜ್) ನೇತೃತ್ವದಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ ಕಾರ್ಯಕರ್ತರು ನರೇಂದ್ರ ಮೋದಿ ರವರು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುತಿದಂತ್ತೆ ಪಟಾಕಿ ಸಿಡಿಸಿ,ಸಿಹಿ ಹಂಚಿದರು ಹಾಗೂ ನರೇಂದ್ರ ಮೋದಿ ಮತ್ತು ಎನ್.ಡಿ.ಎ.ಮೈತ್ರಿ ಕೂಟಕ್ಕೆ ಜೈಕಾರ ಹಾಕಿದರು. ಈ ವೇಳೆ ಮಾತನಾಡಿದ ಡಾ.ರೇವಣ್ಣ ನರೇಂದ್ರ ಮೋದಿ ರವರು 3 ನೇ ಬಾರಿಗೆ ದೇಶದ ಪ್ರಧಾನಿ ಆಗಿರುವುದು ನಮ್ಮ ಸೌಭಾಗ್ಯ ಮತ್ತು ಅತೀವ ಸಂತೋಷದ ವಿಷಯವಾಗಿದೆ. ನರೇಂದ್ರ ಮೋದಿಯವರ ಶ್ರೇಷ್ಠ ಆಡಳಿತದಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ದೇಶವನ್ನು ಗುರುತಿಸುವಂತೆ ಆಗಿದೆ,

ಅಲ್ಲದೆ ರಾಷ್ಟ್ರವನ್ನು ಆರ್ಥಿಕವಾಗಿ ಐದನೇ ಸ್ಥಾನಕ್ಕೆ ಕೊಂಡೊಯ್ಯುವ ಮೂಲಕ ವಿಕಾಸದ ಹಾದಿ ತೋರಿಸಿದ ಮಹಾನ್ ನಾಯಕ ಮೋದಿಜೀ ಆಗಿದ್ದಾರೆ ಅವರ ನಾಯಕತ್ವದಲ್ಲಿ ದೇಶ ಮತ್ತಷ್ಟು ಅಭಿವೃದ್ಧಿ ಕಾಣಲಿದೆ ಎಂದರು. ಮಂಡಲ ಅಧ್ಯಕ್ಷ ಶಿವಕುಮಾರ್ (ಸತ್ಯರಾಜ್) ಮಾತನಾಡಿ ಪ್ರಧಾನಿ ನರೇಂದ್ರ ಮೋದಿ ರವರು ಮೂರನೇ ಬಾರಿ ಪ್ರಧಾನಿಯಾಗುವ ಮೂಲಕ ದಾಖಲೆ ಸೃಷ್ಟಿ ಮಾಡಿದ್ದಾರೆ ಭಾರತವನ್ನು ವಿಶ್ವಗುರುವಾಗಿ ಕೊಂಡೊಯ್ಯುತ್ತಿರುವ ನರೇಂದ್ರ ಮೋದಿ ರವರಿಗೆ ಭಗವಂತ ಆರೋಗ್ಯಕರ ಶಕ್ತಿ ನೀಡಲಿ ಅವರ ನೇತೃತ್ವದಲ್ಲಿ ದೇಶ ಮತ್ತಷ್ಟು ಸಂತುಷ್ಟ ಹಾಗೂ ಬಲಿಷ್ಠವಾಗಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಮೆಡಿಕಲ್ ಕುಮಾರ್, ಶಂಬುದೇವನಪುರ ಮರಿಸ್ವಾಮಿ, ಪುರಸಭಾ ಸದಸ್ಯ ಎಸ್ ಕೆ ಕಿರಣ್, ಡಾ. ಮಲ್ಲಿಕಾರ್ಜುನ ಸ್ವಾಮಿ, ಎಸ್ಎಂಆರ್ ಪ್ರಕಾಶ್, ಕೆಬ್ಬೆ ಹುಂಡಿ ಸೋಮಶೇಖರ್, ಬಿಳಿಗೆರೆ ಹುಂಡಿ ಮಹಾದೇವಸ್ವಾಮಿ, ನಿಲಸೋಗೆ ಬಸವರಾಜು, ಬೆನಕನಹಳ್ಳಿ ವಿಜಯಕುಮಾರ್, ಅಕ್ಕಿ ನಾಗಪ್ಪ,ಬಜ್ಜಿ ನಿಂಗಪ್ಪ, ಲೋಕೇಶ್, ಕಾರ್ ಮಲ್ಲಪ್ಪ, ಕೀರ್ತಿ, ತೋಂಟೇಶ್, ಚೌಹಳ್ಳಿ ಸಿದ್ದರಾಜು,ರಾಮಣ್ಣ, ಪ್ರಭುಸ್ವಾಮಿ, ಪುಟ್ಟಸ್ವಾಮಿ, ಸುನಿಲ್,ಜೆಡಿಎಸ್ ಮಾದ್ಯಮ ವಕ್ತಾರ ತಾಯುರ್ ಪ್ರಕಾಶ್ ಸೇರಿದಂತೆ ಮತ್ತಿತರರು ಹಾಜರಿದ್ದರು.

# ರೈತರು ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಡೇರಿ ಹಾಗೂ ಒಕ್ಕೂಟ



ಕೆ.ಆರ್.ಪೇಟೆ: ರೈತರು ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಡೇರಿ ಹಾಗೂ ಒಕ್ಕೂಟವನ್ನು ಪ್ರಗತಿಯತ್ತ ಕೊಂಡೊಯ್ಯಲು ಮುಂದಾಗಬೇಕು ಎಂದು ಮಂಡ್ಯ ಜಿಲ್ಲಾ ಹಾಲು ಒಕ್ಕೂಟ ನಿರ್ದೇಶಕ ಡಾಲು ರವಿ ತಿಳಿಸಿದರು.

ತಾಲ್ಲೂಕಿನ ಅಕ್ಕಿಹೆಬ್ಬಾಳು ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2023-24ನೇ ಸಾಲಿನ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಮತ್ತು ಮೇಲಂತಸ್ತಿನ ನೂತನ ಕಟ್ಟಡದ ಉದ್ಘಾಟಿಸಿ ಮಾತನಾಡಿರು. ಸಂಘವು ಉತ್ತಮ ರೀತಿಯಲ್ಲಿ ಬೆಳೆಯಬೇಕಾದರೆ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕು.ಕೆಲವು ಸಭೆಗಳಲ್ಲಿ ಅಚ್ಚ ಹಾಲಿಗೆ ಕಲಬೆರಕೆ ಮಾಡಬೇಡಿ ಅಂತ ಎಷ್ಟೇ ತಿಳುವಳಿಕೆ ಮೂಡಿಸಿದರೂ ಕೆಲವು ವ್ಯಕ್ತಿಗಳು ಹಾಲಿಗೆ ಕಲಬೆರಕೆ ಮಾಡುವುದರಿಂದ ಇಡೀ ಗ್ರಾಮದ ಹಾಲನ್ನು ಹಾಳಾಗುತ್ತದೆ. ಇದರಿಂದ ಸಂಘಕ್ಕೆ ಹಾಗೂ ಉತ್ಪಾದಕರಿಗೆ ನಷ್ಟ ಉಂಟಾಗುತ್ತದೆ.ಇನ್ನು ಮುಂದೆ ಹಾಲಿಗೆ ನೀರು ಹಾಕಿದರೆ ಶುಗರ್, ಉಪ್ಪನ್ನು ಹಾಕಿದರೆ ಸಾಲ್ಟ್, ಬೇರೆ ರೀತಿಯ ವಸ್ತುಗಳನ್ನು ಹಾಕಿದರೆ ಕೆಮಿಕಲ್ಸ್ ಎಂದು ಡೆನ್ಮಾರ್ಕ್ ದೇಶದಿಂದ ಕಂಡುಹಿಡಿದಿರುವ ಯಂತ್ರದಿಂದ ಕಂಡು ಹಿಡಿಯಲಾಗುತ್ತದೆ.

ಹಾಲು ಉತ್ಪಾದಕರು ಎಚ್ಚೆತ್ತುಕೊಂಡು ಗುಣಮಟ್ಟದ ಹಾಲನ್ನು ಸಂಘಕ್ಕೆ ಸರಬರಾಜು ಮಾಡುವ ಮೂಲಕ ಸಂಘವು, ನೀವು ಆರ್ಥಿಕವಾಗಿ ಪ್ರಗತಿ ಕಾಣಲು ಸಾಧ್ಯವಾಗುತ್ತದೆ, ಸಂಘವು ಉಳಿದರೆ ನೀವು, ನೀವು ಉಳಿದರೆ ಒಕ್ಕೂಟ, ಒಕ್ಕೂಟ ಉಳಿದರೆ ನಾವು ನೀವೆಲ್ಲಾ ಹಾಗೂ ರೈತರು ರಾಸುಗಳನ್ನು ದೊಡ್ಡ ಮೊತ್ತ ನೀಡಿ ಖರೀದಿ ಮಾಡುತ್ತಾರೆ.ಉತ್ತಮವಾದ ಸಮತೋಲನ ಆಹಾರ ನೀಡಬೇಕು ಏಕೆಂದರೆ ಉತ್ತಮ ಹಾಲಿನ ಇಳುವರಿ ಪಡೆಯಬಹುದು. ಹಸಿರು ಮೇವು, ಒಣ ಮೇವು ಸಮತೋಲನ ಪ್ರಮಾಣದಲ್ಲಿ ನೀಡ ಬೇಕು.ಇದರಿಂದ ರಾಸುಗಳ ಆರೋಗ್ಯ ಉತ್ತಮವಾಗಿರುತ್ತದೆ. ಜತೆಗೆ ಮನೆಯಲ್ಲಿ ದೊರಕುವ ಕಾಳಿನ ನುಚ್ಚು, ಜೋಳ, ಸಜ್ಜೆ, ನವಣೆ, ರಾಗಿ, ಗೋಧಿ ಅಲ್ಲದೇ, ದವಸ ಧಾನ್ಯಗಳ ಉಪ ಪದಾರ್ಥಗಳಾದ ಗೋಧಿ, ಭತ್ತದ ತೌಡು, ತೊಗರಿ ಹೊಟ್ಟು ನೀಡಬೇಕು. ಇದರಿಂದ ಖರ್ಚು ಕಡಿಮೆ. ಕೊಟ್ಟಿಗೆ ಸ್ವಚ್ಛತೆ ಕಾಪಾಡುವುದರಿಂದ ಕೆಚ್ಚಲು ಬಾವಿನಂಥ ಮಾರಕ ರೋಗಗಳಿಗೆ ಕಡಿವಾಣ ಹಾಕಬಹುದು.ಸ್ಥಳದ ಆವಕಾಶ ಇರುವಂತೆ ರೈತರು ಅಜೋಲ ಕಷಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. 2023-24ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸಂಘದ ವ್ಯಾಪ್ತಿಗೆ ಬರುವ ಪ್ರತಿಭಾವಂತ ಮಕ್ಕಳಿಗೆ ಗೌರವಿಸಿದ ಬಳಿಕ ಮಾತನಾಡಿದ ಜೆಡಿಎಸ್ ಮುಖಂಡ ಅಕ್ಕಿಹೆಬ್ಬಾಳು ಎ.ಆರ್ ರಘು ಸಹಕಾರ ಕ್ಷೇತ್ರದಲ್ಲಿ ಜಾತಿ ಮತ್ತು ರಾಜಕೀಯವನ್ನು ಬೆರಸದೆ ಸೇವಾ ಮನೋಭಾವದಿಂದ ಕೆಲಸವನ್ನು ಮಾಡಬೇಕು.ಆಗ ಮಾತ್ರ ನಮ್ಮ ಗ್ರಾಮದ ಸಂಘ ಮತ್ತಷ್ಟು ಪ್ರಗತಿಯಾಗಲು ಸಾಧ್ಯ ಎಂದರು. ಸಭೆಯಲ್ಲಿ ಮಾರ್ಗ ವಿಸ್ತರಣಾಧಿಕಾರಿ ಬಿ.ಸಿ ಮಧು ಕುಮಾರ್ ಈ ವರ್ಷದ ಆಯ್ಯವ್ಯಯ ಮತ್ತು ಮುಂದಿನ ವರ್ಷದ ಬಜೆಟ್‌ನ್ನು ಮಂಡಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಅಕ್ಕಿಹೆಬ್ಬಾಳು ಡಿ.ಎಸ್ ಸೋಮು, ಉಪಾಧ್ಯಕ್ಷ ಧರ್ಮರಾಜು, ನಿರ್ದೇಶಕರಾದ ಹರೀಶ್, ಶಂಕರಪ್ಪ,ಯೋಗೇಶ್, ಬಸವರಾಜು, ಎಂ.ಡಿ ಪವಿತ್ರ,ಶೀಲಜಾ ಎಸ್.ಎ, ವೆಂಕಟೇಶ್, ಹರೀಶ್.ಬಿ, ಯತೀರಾಜು, ಸಂಘದ ಕಾರ್ಯದರ್ಶಿ ಯೋಗೇಶ್, ಹಾಲು ಪರೀಕ್ಷ ರೇಣುಕಾ, ಸಹಾಯಕ ಸ್ವಾಮಿ, ಸೇರಿದಂತೆ ಉಪಸ್ಥಿತರಿದ್ದರು.

ಸುದ್ದಿಯೊಂದಿಗೆ ಮನುಮಾಕವಳ್ಳಿ.ಕೆ.ಆರ್.ಪೇಟೆ

# ತಾಯಿಯಿಂದ ದೂರಾದ ಮರಿಯಾನೆ ರಕ್ಷಣೆ



ಗುಂಡ್ಲುಪೇಟೆ: ತಾಯಾನೆಯಿಂದ ದೂರವಾದ ಮರಿಯಾನೆಯನ್ನು ರಕ್ಷಣೆ ಮಾಡಿ ಆನೆ ಶಿಬಿರಕ್ಕೆ ಕರೆತಂದಿರುವ ಘಟನೆ ತಮಿಳುನಾಡಿನಲ್ಲಿ ನಡೆದಿದೆ. ತಮಿಳುನಾಡಿನ ಕೊಯಮತ್ತೂರಿನಲ್ಲಿ ತಾಯಾನೆಯಿಂದ ತಿರಸ್ಕರಿಸಲ್ಪಟ್ಟ ಮರಿಯಾನೆಯನ್ನು ಅರಣ್ಯ ಅಧಿಕಾರಿಗಳು ಮಧುಮಲೈ ರಾಷ್ಟ್ರೀಯ ಉದ್ಯಾನವನದ ತೆಪ್ಪಕಾಡು ಆನೆ ಶಿಬಿರಕ್ಕೆ ಕರೆ ತಂದು ಆರೈಕೆ ಮಾಡಿದ್ದಾರೆ. ಪುಟ್ಟ ಪುಟ್ಟ ಹೆಜ್ಜೆಯನ್ನಿಟ್ಟು ಆಗಮಿಸಿದ ಬಾಲ ಗಜನ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಮರಿಯಾನೆಗೆ ಹಾಲು, ಹಣ್ಣುಗಳನ್ನು ನೀಡಿ ಅಧಿಕಾರಿಗಳು ಕಾಳಜಿ ತೋರಿದ್ದಾರೆ.

ವರದಿ: ಹಂಗಳ ಮಹದೇವಪ್ರಸಾದ್

# ಸಾಗರದ ಶಾಸಕರಿಂದ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ವಿತರಣೆ

2023-24 ನೇ ಸಾಲಿನ ಅನಿರ್ಬಂಧಿತ ಅನುದಾನದ ಅಡಿಯಲ್ಲಿ ವಿಶೇಷಚೇತನರಿಗೆ ತ್ರಿಚಕ್ರ ವಾಹನ ವಿತರಣಾ ಸಮಾರಂಭ ಸೋಮವಾರ ಸಾಗರದ ಪ್ರವಾಸಿ ಮಂದಿರದಲ್ಲಿ ನಡೆಯಿತು.

11.13 ಲಕ್ಷ ರೂ. ಅನುದಾನಿತ ಮೊತ್ತದಲ್ಲಿ ತಾಲೂಕಿನ 10 ಜನರಿಗೆ ವಾಹನ ವಿತರಿಸಲಾಯಿತು. ಶಾಸಕ ಗೋಪಾಲಕೃಷ್ಣ ಬೇಳೂರು, ತಹಶೀಲ್ದಾರ್ ಕಲೀಂ ಉಲ್ಲಾ, ತಾಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಗುರುಕೃಷ್ಣ ಶೆಣೈ, ಆಯುಕ್ತ ನಾಗಪ್ಪ, ಅಧಿಕಾರಿಗಳಾದ ಮೊಹಮ್ಮದ್ ಹನೀಫ್, ಪೂರ್ಣಿಮಾ ಮೊದಲಾದವರಿದ್ದರು.

ವರದಿ.ರಾಘವೇಂದ್ರ ತಾಳಗುಪ್ಪ



# ಸಿಮ್ಸ್ ಆಸ್ಪತ್ರೆಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಭೇಟಿ

ಚಾಮರಾಜನಗರ, ಜೂನ್ 10- ಮಲೆ ಮಹದೇಶ್ವರ ಬೆಟ್ಟದಲ್ಲಿ ಆತ್ಮಹತ್ಯೆಗೆ ಯತ್ನಿಸಿ ನಗರದ ವೈದ್ಯಕೀಯ ಕಾಲೇಜು (ಸಿಮ್ಸ್) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲೂಕಿನ ಗ್ರಾಮವೊಂದರ ಸಂತ್ರಸ್ತರನ್ನು ಪಶು ಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಭೇಟಿ ಮಾಡಿ ಸಾಂತ್ವನ ಹೇಳಿದರು.



ಚಾಮರಾಜನಗರದ ಹೊರವಲಯದ ಯಡಪುರ ಬಳಿ ಇರುವ ವೈದ್ಯಕೀಯ ಕಾಲೇಜಿನ ಬೋಧನ ಆಸ್ಪತ್ರೆಯಲ್ಲಿ ಸಂತ್ರಸ್ತರು ಪಡೆಯುತ್ತಿರುವ ಚಿಕಿತ್ಸೆ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರಾದ ವೆಂಕಟೇಶ್ ಅವರ ಜೊತೆಗೆ ಸಮಾಜ ಕಲ್ಯಾಣ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಸಿ. ಮಹದೇವಪ್ಪ ಅವರು ಸಹ ಭೇಟಿ ಮಾಡಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದರು.

ಸಂತ್ರಸ್ತರ ಆರೋಗ್ಯ ಕ್ಷೇಮವನ್ನು ವಿಚಾರಿಸಿದ ಸಚಿವರುಗಳು ಸಂತ್ರಸ್ತರು ಅದಷ್ಟು ಬೇಗನೇ ಚೇತರಿಸಿಕೊಳ್ಳಲು ಸೂಕ್ತ ಚಿಕಿತ್ಸೆ ನೀಡುವಂತೆ ಸ್ಥಳದಲ್ಲಿಯೇ ಇದ್ದ ವೈದ್ಯರಿಗೆ ಸೂಚಿಸಿದರು. ಸಂತ್ರಸ್ತರು ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿ ಆರೋಗ್ಯ ಪರಿಸ್ಥಿತಿ ಹೇಗಿತ್ತು?, ಈಗ ಹೇಗಿದೆ ಎಂಬುದರ ಸವಿವರ ಮಾಹಿತಿ ಪಡೆದ ಸಚಿವರುಗಳು ಬಳಿಕ ಸಂತ್ರಸ್ತರಿಗೆ ನಿಮಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು, ಧೈರ್ಯವಾಗಿರುವಂತೆ ಭರವಸೆ ತುಂಬಿದರು.

ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಕಾಡಾ ಅಧ್ಯಕ್ಷರಾದ ಮರಿಸ್ವಾಮಿ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಮೈಸೂರು ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ, ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶದ ಉಪ ಸಂರಕ್ಷಣಾಧಿಕಾರಿ ದೀಪಾ ಜೆ. ಕಂಟ್ರಾಕ್ಟರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ವೈದ್ಯಕೀಯ ಕಾಲೇಜಿನ ಸ್ಥಾನಿಕ ವೈದ್ಯಾಧಿಕಾರಿ ಡಾ. ಕೃಷ್ಣಪ್ರಸಾದ್, ಇತರರು ಇದ್ದರು.



ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ಸೋಸಲೆ ವ್ಯಾಸರಾಜ ಮಠದ ವತಿಯಿಂದ ಆಯೋಜಿಸಿದ್ದ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರ ಶ್ರೀಮನ್ನ್ಯಾಯಸುಧಾ ಮಂಗಳಮಹೋತ್ಸವ ಹಾಗು ಶ್ರೀಗಳ ಸಹಸ್ರ ಚಂದ್ರದರ್ಶನ ಶಾಂತಿಯು ಶ್ರೀಶಾಭಿವಂದನೆ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಮಾಧ್ವ ಮಹಾಸಭಾ ವತಿಯಿಂದ ಶ್ರೀವಿದ್ಯಾಶ್ರೀಶ ತೀರ್ಥರಿಗೆ ಗೌರವ ಸಮರ್ಪಣೆಯನ್ನು ಸಭಾದ ಪರವಾಗಿ ಸಂಘಟನಾ ಕಾರ್ಯದರ್ಶಿ ಎನ್.ಎಸ್. ಸುಧೀಂದ್ರ ರಾವ್ ಮತ್ತು ಹಿರಿಯ ಸದಸ್ಯರಾದ ಶ್ರೀಪಾದರಾವ್ ಅವರು ಸಲ್ಲಿದರು, ಈ ಸಂದರ್ಭದಲ್ಲಿ ಮುಳಬಾಗಿಲು ಶ್ರೀಪಾದರಾಜ ಮಠದ ಪೀಠಾಧಿಪತಿ ಶ್ರೀಸುಜಯ ನಿಧಿ ತೀರ್ಥರು, ಬಾಳಿಗಾರು ಅಕ್ಷಯೋಭ್ಯ ಮಠದ ಕಿರಿಯ ಶ್ರೀಗಳಾದ ಶ್ರೀ ಅಕ್ಷಯೋಭ್ಯ ರಾಮಪ್ರಿಯತೀರ್ಥರು, ಎಸ್ ವಿ ಬಿ ಸಿ ಕನ್ನಡ ಚಾನೆಲ್ ನ ನಿರ್ದೇಶಕರಾದ ಡಾ,ಡಿ.ಪಿ. ಅನಂತ್ ಅವರು ಉಪಸ್ಥಿತರಿದ್ದರು.

## ಸಮಾಜ ಸೇವೆಯೊಂದೇ ನಮ್ಮ ಸಮುದಾಯದ ಗುರಿ ನಾಗರಾಜ್

ಕೋಲಾರ:- ಕೊರಮ-ಕೊರಚ ಸಮುದಾಯದಿಂದ ಕೋಲಾರ ಜಿಲ್ಲಾ ಮುಖಂಡರು ಕೊಳತ್ತೂರು ನಾಗರಾಜು ರವರು ಅಧ್ಯಕ್ಷತೆಯಲ್ಲಿ ಸಮುದಾಯದ ಕಿಡ್ನಿ ಸಮಸ್ಯೆಯುಳ್ಳ ಯುವಕನಿಗೆ ಹಣ ಮತ್ತು ಅವರ ಕುಟುಂಬಕ್ಕೆ ದವಸ ದಾನ್ಯ ಮತ್ತು ಅಕ್ಕಿಯನ್ನು ವಿತರಿಸಿದರು. ಕೋಲಾರ ಜಿಲ್ಲಾ ಕೊರಮ-ಕೊರಚ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಸಭೆಯಲ್ಲಿ ಅವರು ಹಣವನ್ನು ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ




ಕೊಳತೂರು ನಾಗರಾಜು ರವರು ತುಂಬಾ ವರ್ಷಗಳಿಂದ ಸಮುದಾಯವು ಜನರಿಗೋಸ್ಕರ ದುಡಿಯುತ್ತಿದ್ದು, ನಾವು ಸಮಾಜಕ್ಕಾಗಿ ಸೇವೆ ಮಾಡಲಿದ್ದೇವೆ ಸಮುದಾಯವನ್ನು ಅಭಿವೃದ್ಧಿಪಡಿಸುವುದು ಮತ್ತು ಶಿಕ್ಷಣ ಮತ್ತು ಸಮಾಜದಲ್ಲಿ ಬದುಕುವ ಹಕ್ಕನ್ನು ನೀಡುವುದು ಮತ್ತು ಸಮುದಾಯದ ಗುರಿ ಶಿಕ್ಷಣ, ಸಂಘಟನೆ ಮತ್ತು ಹೋರಾಟಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದು ಸಮುದಾಯದ ಜನರು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಜೊತೆಗೆ ನಮಗೆ ಪ್ರತಿಯೊಬ್ಬ ಯುವಕರಿಂದ ಮತ್ತು ನಮ್ಮ ಕೊರಮ-ಕೊರಚ ಸಮಾಜದಿಂದ ಪ್ರತಿಯೊಬ್ಬರ ಬೆಂಬಲ ಬೇಕು. ನಮ್ಮ ಸಮುದಾಯವನ್ನು ಅಭಿವೃದ್ಧಿ ಪಡಿಸಬೇಕಾಗಿದೆ ಎಂದು ಕೊಳತ್ತೂರು ನಾಗರಾಜ್ ರವರು ತಿಳಿಸಿದರು.

ಈ ಸಂದರ್ಭದಲ್ಲಿ ಕೊರಮ-ಕೊರಚ ಮಹಾಸಭಾದ ರಾಜ್ಯಾಧ್ಯಕ್ಷ ಸಂಪತ್ ಕುಮಾರ್ ರವರು ಮಾತನಾಡಿ ಎಲ್ಲರೂ ಸಮುದಾಯದ ಅಭಿವೃದ್ಧಿಗಾಗಿ ಮತ್ತು ಮಕ್ಕಳ ಭವಿಷ್ಯಕ್ಕಾಗಿ ದುಡಿಯಬೇಕು ಹಾಗೂ ಉತ್ತಮ ಸಮಾಜ ಕಟ್ಟುವ ನಿಟ್ಟಿನಲ್ಲಿ ಹಾಗೂ ಸಮಾಜ ಸೇವೆ ಮಾಡಲು ಯುವ ಸಮುದಾಯ ಮುಂದಾಗಬೇಕು ಎಂದು ಕೋರಿದರು. ಈ ಸಂದರ್ಭದಲ್ಲಿ ವೀರಾಪುರ ಲಕ್ಷ್ಮಿನಾರಾಯಣ, ಕೊಳತ್ತೂರು ನಾಗರಾಜು ಕೋಲಾರ ಲಕ್ಷ್ಮಿಪತಿ, ಚಿನ್ನಾಪುರ ರಾಮಯ್ಯ ಮಗ ಮಂಜುನಾಥ್, ಬೆಳ್ಂಬೂರಿ ಹರೀಶ್, ಬ್ಯಾಂಕ್ ರಾಮಚಂದ್ರಪ್ಪ, ವೆಂಕಟೇಶಪ್ಪ ಮಾಸ್ಟರ್ ತಿಮವರತಳ್ಳಿ ಶಂಕರ್ ಹಾಗೂ ಇತರರು ಇದ್ದರು.

ವರದಿ: ಗೋಪಾಲಕೃಷ್ಣ, ಕೋಲಾರ

## ಕೆ.ಆರ್.ಪೇಟೆ ಪಟ್ಟಣದ ಟಿ.ಬಿ ವೃತ್ತದಲ್ಲಿ ಸಾರ್ವಜನಿಕರಿಗೆ ಸಿಹಿತಿನಿಸಿ ಪಟಾಕಿ ಸಿಡಿಸುವ ಮುಖಾಂತರ ಸಂಭ್ರಮಾಚರಣೆ

ಕೆ.ಆರ್.ಪೇಟೆ:ಮಾಜಿ ಮುಖ್ಯಮಂತ್ರಿ ಹಾಗೂ ಮಂಡ್ಯ ಜಿಲ್ಲಾ ನೂತನ ಸಂಸದರಾದ ಹೆಚ್.ಡಿ ಕುಮಾರಸ್ವಾಮಿ ರವರು ಪ್ರಧಾನಿ ನರೇಂದ್ರ ಮೋದಿ ರವರ ಸಚಿವ ಸಂಪುಟ ದರ್ಜೆಯ ಆಡಳಿತದಲ್ಲಿ ಸಾರಾಯಿ ನಿಷೇಧ, ಲಾಟರಿ ನಿಷೇಧ, ಗ್ರಾಮ ವಾಸ್ತವ್ಯ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಅನುಷ್ಠಾನ ಮಾಡಿದ್ದ ಕೀರ್ತಿ ಇವರದು, ಸದಾ ಜನಪರ ಸಮಾಜಮುಖಿ ಮಾಡುತ್ತಿರುವ ನಾಡಿನ ಜನತೆಯ ಕೀರ್ತಿ ಹೆಚ್ಚಿಸಿದೆ. ನೂತನ ಕೇಂದ್ರ ಸಚಿವ ಎಚ್ ಡಿ ಕೆ ಅವರಿಂದ ಈ ದೇಶ ಮತ್ತು ರಾಜ್ಯದ ರೈತಪಿ ವರ್ಗ ಬಹಳಷ್ಟುನ್ನು ನಿರೀಕ್ಷಿಸಿದೆ ಆ ನಿರೀಕ್ಷೆಯನ್ನು ಹಸನಾಗಿಸಲು



ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದಂತೆ ಜೆಡಿಎಸ್ ಕಾರ್ಯಕರ್ತರು ಹೆಚ್.ಡಿ ಕುಮಾರಸ್ವಾಮಿ ರವರ ಅಭಿಮಾನಿಗಳು ಕೆ.ಆರ್.ಪೇಟೆ ಪಟ್ಟಣದ ಟಿ.ಬಿ ವೃತ್ತದಲ್ಲಿ ಸಾರ್ವಜನಿಕರಿಗೆ ಸಿಹಿತಿನಿಸಿ ಪಟಾಕಿ ಸಿಡಿಸುವ ಮುಖಾಂತರ ಸಂಭ್ರಮಾಚರಣೆ ಆಚರಿಸಲಾಯಿತು.

ಸಾರ್ವಜನಿಕರಿಗೆ ಸಿಹಿತಿನಿಸಿ ಮಾತನಾಡಿದ ಟಿ.ಎ.ಪಿ.ಸಿ.ಎಂ.ಎಸ್ ನಿರ್ದೇಶಕ ಹೆಚ್.ಟಿ ಲೋಕೇಶ್ ದೇಶ ಕಾಯುವ ಸುಭದ್ರ ಸರ್ಕಾರದಲ್ಲಿ ದೇಶದ ರೈತರ ಹಿತ ಕಾಯಲು ರೈತನಾಯಕ ಹೆಚ್.ಡಿ ಕುಮಾರಸ್ವಾಮಿ ಪ್ರಮಾಣವಚನ ಸ್ವೀಕರಿಸುತ್ತಿರುವುದು ದೇಶದ ಪ್ರತಿಯೊಬ್ಬ ರೈತರ ಹೆಮ್ಮೆ ಪಡುವ ವಿಚಾರ.ಈ ಕ್ಷಣದಿಂದಲೇ ರೈತರ ಅಭಿವೃದ್ಧಿ ಕಲ್ಯಾಣಗಳು ಆರಂಭವಾಗಲಿದೆ. ಏಕೆಂದರೆ ಎಚ್‌ಡಿಕೆ ಮುಖ್ಯಮಂತ್ರಿ ಚಿಂತನೆಗಳನ್ನು ಇಟ್ಟುಕೊಂಡಿರುವ ವ್ಯಕ್ತಿ ನಮ್ಮ ಜಿಲ್ಲೆಯಿಂದ ಅಭೂತಪೂರ್ವ ಗೆಲುವಿನೊಂದಿಗೆ ಸಂಸದರಾಗಿ ಆಯ್ಕೆಯಾಗಿ ಜನಪದ ಕಾಳಜಿ ಇರುವ ಪ್ರಧಾನಿ ನರೇಂದ್ರ ಮೋದಿ ಅವರ ಸಚಿವ ಸಂಪುಟದಲ್ಲಿ ಕೇಂದ್ರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವುದು ನಮ್ಮ ಮಂಡ್ಯ ಜನತೆಯ ಸೌಭಾಗ್ಯ ಎಂದು ತಿಳಿಸಿದರು.

ಬಳಿಕ ಮಾತನಾಡಿದ ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ವಿ.ಎಸ್ ಧನಂಜಯ್ ಕುಮಾರ್ ದೇಶ ಕಂಡ ಜನಪ್ರಿಯ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ರವರ ಸಚಿವ ಸಂಪುಟದಲ್ಲಿ ರಾಜ್ಯ ರೈತರ ಹಿತ ಕಾಪಾಡುತ್ತಾ ಸದಾ ರೈತರ ಬಗ್ಗೆ ಬಡವರ ಬಗ್ಗೆ ಚಿಂತಿಸುವ ನಮ್ಮ ನೆಚ್ಚಿನ ನಾಯಕ ಹೆಚ್. ಡಿ ಕುಮಾರಸ್ವಾಮಿ ಅವರು ಈ ಸುವರ್ಣ ಗಳಿಗೆಯಲ್ಲಿ ಭಾರತ ಸರ್ಕಾರದ ನೂತನ ಸಂಪುಟ ದರ್ಜೆಯ ಸಚಿವರಾಗಿ ಪದಗ್ರಹಣ ತಾಯಿ ಚಾಮುಂಡೇಶ್ವರಿ ತಮಗೆ ಶಕ್ತಿ ನೀಡಲಿ ಎಂದು ಶುಭಕೋರಿದರು.

ಈ ಸಂದರ್ಭದಲ್ಲಿ ಸಂತೆಬಾಚಹಳ್ಳಿ ಹೋಬಳಿಯ ಜೆಡಿಎಸ್ ಅಧ್ಯಕ್ಷ ರವಿ ಕುಮಾರ್, ಮುಖಂಡರಾದ ಜೈನಹಳ್ಳಿ ಸಂತೋಷ್,ರವಿ ಕುಮಾರ್,ಗುತ್ತಿಗೆದಾರ ಬಾಲ್ಯದಕೆರೆ ಕೃಷ್ಣೇಗೌಡ,ರವಿ (ಗಜ),ಆನಂದ್,ಜೆಡಿಎಸ್ ಎ.ಸಿ ಘಟಕದ ನಗರ ಅಧ್ಯಕ್ಷ ಗಣೇಶ್,ರಾಮು (ಭಲೇ ರಾಮ ), ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್,ಯಡಹಳ್ಳಿ ಪ್ರಶಾಂತ್, ಜೀವನ್, ಸುನೀಲ್,ಕೊಮ್ಮನಹಳ್ಳಿ ರಾಹುಲ್, ಮಹದೇವ್ ಕೆ ಆರ್ ಪೇಟೆ, ಶಶಾಂಕ್, ಜೆಡಿಎಸ್ ಕಾರ್ಯಕರ್ತರು ಸೇರಿದಂತೆ ಉಪಸ್ಥಿತರು ಭಾಗವಹಿಸಿದ್ದರು.

ಸುದ್ದಿಯೊಂದಿಗೆ ಮನು ಮಾಕವಳ್ಳಿ ಕೆ ಆರ್ ಪೇಟೆ

## ವಿದ್ಯಾರ್ಥಿಗಳು ಶಿಸ್ತಿನ ಜೊತೆಗೆ ಪಾಲಕರನ್ನು ಗೌರವಿಸಬೇಕು: ಡಾ. ಎಂ.ಪವನ್‌ಕಲ್ಯಾಣ್



ಮುಳಬಾಗಿಲು: ಇಂದು ಕಲ್ಯಾಣ್ ಫೌಂಡೇಶನ್ ಸೊಸೈಟಿಯ ಆಶ್ರಯದಲ್ಲಿ ಮುಳಬಾಗಲು ತಾಲೂಕಿನ ಎಮ್ಮೆನಾಥ ಅಂಜನಾದ್ರಿ ಪ್ರೌಢಶಾಲೆಯಲ್ಲಿ ನೋಟ್ ಬುಕ್ ವಿತರಣಾ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಸ್ಥೆಯ ಅಧ್ಯಕ್ಷ ಹಾಗೂ ಸಿಇಒ ಡಾ.ಎಂ.ಪವನ್ ಕಲ್ಯಾಣ್ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಶೈಕ್ಷಣಿಕ ವರ್ಷಾರಂಭದಿಂದಲೇ ವಿದ್ಯಾರ್ಥಿಗಳು ಶಿಸ್ತಿನ ಜೊತೆಗೆ ಪಾಲಕರನ್ನು ಗೌರವಿಸಬೇಕು ಎಂದು ತಿಳಿಸಿದರು. ಜೀವನದಲ್ಲಿ ಒಂದು ಗುರಿಯನ್ನು ಇಟ್ಟುಕೊಂಡು ಆ ನಿಟ್ಟಿನಲ್ಲಿ ಪ್ರಯತ್ನಿಸಬೇಕು,

ಆಗ ಗೆಲುವು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ನಂತರ ಸಮಾರಂಭದಲ್ಲಿ 70 ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸಿದರು.

ಡಾ.ಎಂ. ಪವನ್ ಕಲ್ಯಾಣ್ ಅವರು ಈ ರೀತಿಯ ಸಮಾಜಮುಖಿ ಕಾರ್ಯಗಳಿಂದ ಜನ ಮನ್ನಣೆ ಗಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹಾಗೂ ಇತರರು ಭಾಗವಹಿಸಿದ್ದರು.

## ಪಕ್ಷಾತೀತವಾಗಿ ತಹಶೀಲ್ದಾರ ಮೂಲಕ ರಾಜ್ಯಪಾಲರಿಗೆ ಮನವಿ

ಮುಂಜಾನೆ ವಾರ್ತೆ. ಸುದ್ದಿ. ಮುದ್ದೇಬಿಹಾಳ ಪಟ್ಟಣದ ಪುರಸಭೆ ಎಲ್ಲ ಸದಸ್ಯರು ಪಕ್ಷಾತೀತವಾಗಿ ಕರ್ನಾಟಕ ರಾಜ್ಯದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು ಮೀಸಲಾತಿ ನಿಗಧಿ ಪಡಿಸಿ ಸದ್ಯಸರ ಅವಧಿ ಮುಂದುವರಿಸಬೇಕೆಂದು ಆಗ್ರಹಿಸಿ ತಹಶಿಲ್ದಾರ ಮೂಲಕ ರಾಜ್ಯಪಾಲರಿಗೆ ಸೋಮವಾರ ಮನವಿ ಸಲ್ಲಿಸಿದರು.

ಮುದ್ದೇಬಿಹಾಳ: ಕರ್ನಾಟಕ ರಾಜ್ಯದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು ಮೀಸಲಾತಿ ನಿಗಧಿ ಪಡಿಸಿ ಸದ್ಯಸರ ಅವಧಿ ಮುಂದುವರಿಸಬೇಕೆಂದು ಆಗ್ರಹಿಸಿ ಪಟ್ಟಣದ ಪುರಸಭೆ ಸರ್ವ ಸದಸ್ಯರು ಪಕ್ಷಾತೀತವಾಗಿ



ತಹಶಿಲ್ದಾರ ಮೂಲಕ ರಾಜ್ಯಪಾಲರಿಗೆ ಸೋಮವಾರ ಮನವಿ ಸಲ್ಲಿಸಿದರು.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಪಟ್ಟಣದ ಪುರಸಭೆಯ ಸನ್ 2018 ನೇ ಸಾಲಿನಲ್ಲಿ ಚುನಾವಣೆ ಮುಕ್ತಾಯಗೊಂಡ ಬಳಿಕ ನಡೆದ ಚುನಾವಣೆಯಲ್ಲಿ ಪುರಸಭೆ ಸದಸ್ಯರಾಗಿ ಆಯ್ಕೆಯಾಗಿದ್ದು ನಂತರ ಅಧ್ಯಕ್ಷರ ಉಪಾಧ್ಯಕ್ಷರ ಮೀಸಲಾತಿಯನ್ನು 2 ವರ್ಷದ ನಂತರ ನಿಗಧಿಪಡಿಸಿದ್ದರ ಪ್ರಕಾರ ಮೊದಲನೇ ಅವಧಿಗೆ ಅಧ್ಯಕ್ಷರು, ಉಪಾಧ್ಯಕ್ಷರು ಆಯ್ಕೆಯಾಗಿ ಅಧಿಕಾರವೂ ಕೂಡ ನಡೆಸಿ ಮೊದಲನೇ ಅವಧಿ 27- ಎಪ್ರೀಲ್-2023 ರಂದು ಅವಧಿ ಮುಕ್ತಾವಾಗೊಂಡಿದೆ ಆದರೇ ಕಳೆದ ಮುಕ್ತಾಯಗೊಂಡ 30 ತಿಂಗಳ ಅವದಿ ಎರಡನೆ ಅವಧಿಗೆ ಸರಕಾರ ಮಿಸಲಾತಿ ನೀಡಿ ಅಧಿಕಾರ ನಡೆಸುವ ಕಾರ್ಯಕ್ಕೆ ಸರಕಾರ ಮುಂದಾಗದೇ ಇರುವುದರಿಂದ ಅದ್ಯಕ್ಷ ಉಪಾಧ್ಯಕ್ಷರ ಆಡಳಿತ ಮಂಡಳಿ ಇಲ್ಲದೇ ನಾಮಕಾವಸ್ತೆ ಸದಸ್ಯರಾಗಿ ಉಳಿದಿದ್ದೇವೆ ಇದರಿಂದಾಗಿ ಪಟ್ಟಣದ ಮೂಲಬೂತ ಸೌಲಭ್ಯಗಳನ್ನು ನೀಡುವಲ್ಲಿ ವಿಫಲರಾಗಿ ಅಸಹಾಯಕರಾಗಿ ಕೈಕಟ್ಟಿಕುಳಿತುಕೊಂಡಿದ್ದೇವೆ ಮಾತ್ರವಲ್ಲದೇ ನಮ್ಮನ್ನೇ ನಂಬಿ ಗೆಲ್ಲಿಸಿದ ನಮ್ಮ ನಮ್ಮ ವಾರ್ಡಿನ ಜನರು ಹಿಡಿಶಾಪ ಹಾಕುತ್ತಿದ್ದಾರೆ. ಆಡಳಿತ ಮಂಡಳಿಯು ರಚನೆಯಾಗದೇ ಇರುವುದು ಒಂದು ಕಡೆಯಾದರೇ ಪುರಸಭೆಯ ಯಾವೋಬ್ಬ ಅಧಿಕಾರಿಗಳು ನಮ್ಮ ಮಾತುಗಳನ್ನು ಕೇಳದೇ ತಮ್ಮ ಮನಬಂದಂತೆ ಮನಸೋ ಇಚ್ಛೇ ನಡೆದುಕೊಳ್ಳುತ್ತಿದ್ದಾರೆ. ಸರಕಾರಿ ಕೆಲಸಕ್ಕಾಗಿ ನಿತ್ಯ ಸಾರ್ವಜನಿಕರು ಪುರಸಭೆ ಅಲೆಅಲೇದು ಸುಸ್ತಾಗುತ್ತಿದ್ದಾರೆ ಸಾರ್ವಜನಿಕರ ಕುಂದುಕೊರತೆ ನೀಗಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣಗೊಂಡಿದೆ. ಜೊತಗೆ ಅಭಿವೃದ್ಧಿ ಕಾಮಗಾರಿಗಳು ಕುಂಟಿತಗೊಂಡು ಸಮಸ್ಯೆಗಳ ಆಗವಾಗಿ ಬೆಳೆದು ನಿಂತಿದೆ. ಇಂತಹ ಸಂದರ್ಭದಲ್ಲಿ ಈಗಾಗಲೇ ನಮ್ಮ ಅವಧಿ ಕೂಡಾ ಮುಕ್ತಾಯಗೊಳ್ಳುತ್ತಿದೆ ಯಾವೂದೇ ಸರಕಾರದ ಹಾಗೂ ಸಂವಿದಾನದ ಪ್ರಕಾರ ನಮಗೆ ಇರುವ ಅಧಿಕಾರ ನಮಗೆ ಸಿಗದೇ ವಂಚಿತಗೊಂಡು ಅನ್ಯಾಯವಾಗಿದೆ. ಈ ಹಿನ್ನೆಲೆಯಲ್ಲಿ ಕಳೆದ ಮುಕ್ತಾಯಗೊಂಡ 30 ತಿಂಗಳ ಅವಧಿಯನ್ನು ಹೊರತುಪಡಿಸಿ ಇನ್ನುಳಿದ ಸಂಪೂರ್ಣ 30 ತಿಂಗಳ ಅವಧಿಯನ್ನು ವಿಸ್ತರಿಸುವ ಮೂಲಕ ಆಡಳಿತ ಮಂಡಳಿಯ ನೇಮಕಕ್ಕೆ ಅಧ್ಯಕ್ಷ ಉಪಾಧ್ಯಕ್ಷರ ಮಿಸಲಾತಿ ನೀಡಿ ನಮಗೆ ನ್ಯಾಯ ಒದಗಿಸಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ವೇಳೆ ಪುರಸಭೆ ಸದಸ್ಯರಾದ ಮೈಬೂಬ ಗೊಳಸಂಗಿ, ಬಸವರಾಜ ಮೂರಾಳ, ಪ್ರತಿಭಾ ಅಂಗಡಗೇರಿ, ಪ್ರೀತಿ ದೇಗಿನಾಳ, ಭಾರತಿ ಪಾಟೀಲ, ರೀಯಾಜಹಮ್ಮದ ಢವಳಗಿ, ಶಾಂತಾಬಾಯಿ ರಾಮಣ್ಣ ಪೂಜಾರಿ, ಚನ್ನಪ್ಪ ಕಂಠಿ, ಸಂಗಮ್ಮ ದೇವರಳ್ಳಿ, ಸಹನಾ ಬಡಿಗೇರ, ಯಲ್ಲಪ್ಪ ನಾಯಕಮಕ್ಕಳ, ಶಿವು ಶಿವಪುರ ಅಶೋಕ ವನಹಳ್ಳಿ, ಸೇರಿದಂತೆ ಹಲವರು ಇದ್ದರು.

Printed by : H.L.AMARANATH, Owned by: H.L.AMARANATH, Printed at : SREE MANJUNATHA ENTERPRISES No. 7, Tirugappa lane, Cottonpet cross, Cottonpet, Bangalore-560053.
Published at : No.97, 2nd Cross, Vivekanandanagar, Khadi Commission Layout, BSK 3rd Stage, Kathariguppe Main Road, Bengaluru-560085. Mobile: 9663122276 Editor : H.L.AMARANATH